22	Filing of pot holes with WBM and murrum from P.No. 1525 to Join kanbargi main road and mines and zealogy department office to P.No. 4004	4.92
23	Improvements roads from Harsha Hotel to Uday school	16.26

24	Maintainance of Street Light	0.88
25	Maintainance of Water Supply	1.32
26	Construction of class room for HIV infected children room	18.32
27	Maintainance of Street Light (HESCOM)	13.1
28	pot hole filling from vantumuri colony cross to Harsha Hotel	4.76
29	Estimate for supplying and laying of 219MM dia MS Pipe at Vantmuri colony and replacement of 160 mm dia PUC pipeline for p.No. 278 to 01	8.81
30	Maintainance of Water Supply	0.66
31	Cleaning Soil and Drains under several plots	10.16
32	Applying saral jal yojana under several plots	5.79
33	Water supply charges (K.U.W.S)	5.38
34	Water supply charges (K.U.W.S)	5.38
35	Maintainance of Water Supply	0.66
36	Maintainance of Street Light	0.44
37	Maintainance of Street Light	0.44
38	Maintainance of Street Light (HESCOM)	4.98
39	Maintainance of Water Supply	0.66
40	Proposed construction of toilet, bathrooms for HIV infected childrens	5.16
41	Maintainance of Street Light	0.88
42	Dismantling and trafortation of RCC drain P.No. 738 to 707, 694 to 706 and Park Sy.No. 549	4.28
43	Water supply charges (K.U.W.S)	10.76
44	Maintainance of Water Supply	0.66
45	Maintainance of Street Light (HESCOM)	5.09
46	Construction CD work at P.No.91	1.85
47	Cleaning the drains front of cricket Stadieum in Ramtirthnagar	3.11
48	Estimate for supplying and fixing of brand new 300mm dia water(machanical flow) meter at shree nagar pumphouse	3.6
49	filing pot holes from reliance tower to harsha hotel	4.87

50	Water supply charges (K.U.W.S)	5.38
51	Maintainance of Water Supply	0.66
52	Maintainance of Street Light	0.88
53	Maintainance of Street Light (HESCOM)	4.34
54	Oproviding Saral Jal Scheme to P.No 1193	1.69
55	Construction of CD near No. 1016	1.5
56	Construction of classd room for HIV infectedf cghilderen	8.75
57	Maintainance of Water Supply	0.56
58	Dishelting and cleaning of shoulder portiion near various plots	9.32
59	Improvements to roads from p.No.1558 to Gokak Road , P.No. 837 to Gokak Road, from harsha hotel to Uday School, from P.No. 1426 to Kanbargi main road.	1.35
60	Providing of new windings to motor No. 2 in Shree Narga pump House Belagavi	1.29
61	Shifting of Transformer	0.92
62	Maintainance of Water Supply	0.66
63	Maintainance of Street Light	0.88
64	Construction od septick tank and providing borewell for HIV infected children	5.25
65	Filing of pot holes near various plots	9.77
66	Repair of motor	1.29
67	Providing for trasfortation and supplying of water tanks during Ganesh Fastivals	5.42
68	Construction of box culvert at Ganesh circle	13.55
69	Providing saral jal scheme to P.No. 1016	1.69
70	Third party inspection for the work estimate for sup-plying and laying of 219mm dia ms pipe at vantmuri colony	0.06
71	Providing submerciable pumpset	0.19
	Total	**353.04**

ಆಯುಕ್ತರು,
ನಗರಾಭಿವೃದ್ಧಿ ಪ್ರಾಧಿಕಾರ,
ಬೆಳಗಾವಿ.

ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ ಬೆಳಗಾವಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಬಡಾವಣೆಗಳಲ್ಲಿ ಅಭಿವೃದ್ಧಿ ಕಾಮಗಾರಿಗಳ ವೆಚ್ಚದ ವಿವರ.

ಯೋಜನೆ ಸಂಖ್ಯೆ:51 ಲಕ್ಕ್ಮೀ ಟೇಕಡಿ 01-04-2017 ರಿಂದ 31-03-2018

ಅನಂ	ಕಾಮಗಾರಿ ವಿವರ	ವೆಚ್ಚ ಲಕ್ಷಗಳಲ್ಲಿ
1	Construction compound hall at park private layoput in R.S.No. 73	4.99
	Total	**4.99**

ಆಯುಕ್ತರು,
ನಗರಾಭಿವೃದ್ಧಿ ಪ್ರಾಧಿಕಾರ,
ಬೆಳಗಾವಿ.

ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ ಬೆಳಗಾವಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಬಡಾವಣೆಗಳಲ್ಲಿ ಅಭಿವೃದ್ಧಿ ಕಾಮಗಾರಿಗಳ ವೆಚ್ಚದ ವಿವರ.

ಯೋಜನೆ ಸಂಖ್ಯೆ:40 ಕುವೆಂಪು ನಗರ 01-04-2017 ರಿಂದ 31-03-2018

ಅನಂ	ಕಾಮಗಾರಿ ವಿವರ	ವೆಚ್ಚ ಲಕ್ಷಗಳಲ್ಲಿ
1	Paid expenses towards survey charges bill	0.003
	Total	**0.003**

ಆಯುಕ್ತರು,
ನಗರಾಭಿವೃದ್ಧಿ ಪ್ರಾಧಿಕಾರ,
ಬೆಳಗಾವಿ.

ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ ಬೆಳಗಾವಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಬಡಾವಣೆಗಳಲ್ಲಿ ಅಭಿವೃದ್ಧಿ ಕಾಮಗಾರಿಗಳ ವೆಚ್ಚದ ವಿವರ.

ಯೋಜನೆ ಸಂಖ್ಯೆ:56 ಶ್ರೀ ಎಚ್ ಡಿ ಕುಮಾರಸ್ವಾಮಿ ಬಡಾವಣೆ 01-04-2017 ರಿಂದ 31-03-2018

ಅನಂ	ಕಾಮಗಾರಿ ವಿವರ	ವೆಚ್ಚ ಲಕ್ಷಗಳಲ್ಲಿ
1	Street Light and Water Supply (HESCOM)	1.06
2	Maintainance of Water Supply	0.35
3	Maintainance of Water Supply	0.93
4	Maintainance of Water Supply	0.66
5	Maitainance of Street Light	0.61
6	Maintainance of Water Supply	0.66
7	Street Light and Water Supply (HESCOM)	2.82
8	Maintainance of Water Supply	0.66
9	Maintainance of Water Supply	0.66
10	Maitainance of Street Light	0.9
11	Street Light and Water Supply (HESCOM)	0.91
12	Maintainance of Water Supply	0.66
13	Maitainance of Street Light	0.88
14	Development of Garden	11.46
15	Maintainance of Water Supply	0.66
16	Street Light and Water Supply (HESCOM)	1.09
17	Cleaning Soil and Drains under several plots	5.03
18	Cleaning Soil and Drains under several plots	1.95
19	Maintainance of Water Supply	0.66
20	Maitainance of Street Light	0.88
21	Maintainance of Water Supply	0.66
22	Street Light and Water Supply (HESCOM)	0.48
23	Cleaning and Levelling of Road surface at southern side of bouxite Road plot No.07 to 12	0.23
24	Suppling and Fixing Shock proof weather proof, rust proof water proof street light control	0.91
25	Maintainance of Water Supply	0.66
26	Maitainance of Street Light	0.88
	Total	**37.31**

ಆಯುಕ್ತರು,
ನಗರಾಭಿವೃದ್ಧಿ ಪ್ರಾಧಿಕಾರ,
ಬೆಳಗಾವಿ.

ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ ಬೆಳಗಾವಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಬಡಾವಣೆಗಳಲ್ಲಿ ಅಭಿವೃದ್ಧಿ ಕಾಮಗಾರಿಗಳ ವೆಚ್ಚದ ವಿವರ.

ಯೋಜನೆ ಸಂಖ್ಯೆ:61, 2ನೇ ಹಂತ, ಕಣಬರ್ಗಿ 01-04-2017 ರಿಂದ 31-03-2018

ಅನಂ	ಕಾಮಗಾರಿ ವಿವರ	ವೆಚ್ಚ ಲಕ್ಷಗಳಲ್ಲಿ
1	Survey charges	0.97
2	Preperation of estimate for Housing scheme charges	0.96
3	Paid towardsd charges for Autocad and Drafting	0.12
4	Paid towards preperation of detailed project report for lowering and leveling	0.97
5	Paid towards survey charges bill	0.03
6	Preperation of estimate towards 4 city enterance arches, bidi market (Multiple units, development of amusement park, EWS group housings gears	3.42
7	Preperartion estimate to development street side vendor Kioske	8.27
8	Prepaeration of estimate to development of roads	1.87
	Total	**16.61**

ಆಯುಕ್ತರು,
ನಗರಾಭಿವೃದ್ಧಿ ಪ್ರಾಧಿಕಾರ,
ಬೆಳಗಾವಿ.

ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ ಬೆಳಗಾವಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಬಡಾವಣೆಗಳಲ್ಲಿ ಅಭಿವೃದ್ಧಿ ಕಾಮಗಾರಿಗಳ ವೆಚ್ಚದ ವಿವರ.

ಯೋಜನೆ ಸಂಖ್ಯೆ:47 ಸಹ್ಯಾದ್ರಿನಗರ ಬಡಾವಣೆ 01-04-2017 ರಿಂದ 31-03-2018

ಅನಂ	ಕಾಮಗಾರಿ ವಿವರ	ವೆಚ್ಚ ಲಕ್ಷಗಳಲ್ಲಿ
1	Development of Garden	4.72
	Total	**4.72**

ಆಯುಕ್ತರು,
ನಗರಾಭಿವೃದ್ಧಿ ಪ್ರಾಧಿಕಾರ,
ಬೆಳಗಾವಿ.

ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ ಬೆಳಗಾವಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಬಡಾವಣೆಗಳಲ್ಲಿ ಅಭಿವೃದ್ಧಿ ಕಾಮಗಾರಿಗಳ ವೆಚ್ಚದ ವಿವರ.

ಯೋಜನೆ ಸಂಖ್ಯೆ:61 ಕಣಬರ್ಗಿ 01-04-2017 ರಿಂದ 31-03-2018

ಅನಂ	ಕಾಮಗಾರಿ ವಿವರ	ವೆಚ್ಚ ಲಕ್ಷಗಳಲ್ಲಿ
1	Prepering of estimate for water supply	10
2	Preperation of estimate for ground leveling	0.79
	Total	**10.79**

ಆಯುಕ್ತರು,
ನಗರಾಭಿವೃದ್ಧಿ ಪ್ರಾಧಿಕಾರ,
ಬೆಳಗಾವಿ.

24	Maintainance of Water Supply	1.7
25	Maintainance of Street Light (HESCOM)	7.03
26	suppling and fixing of sv fitting and flubrecent street with accessiores	15.46
	Total	**143.08**

ಆಯುಕ್ತರು,
ನಗರಾಭಿವೃದ್ಧಿ ಪ್ರಾಧಿಕಾರ,
ಬೆಳಗಾವಿ.

ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ ಬೆಳಗಾವಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಬಡಾವಣೆಗಳಲ್ಲಿ ಅಭಿವೃದ್ಧಿ ಕಾಮಗಾರಿಗಳ ವೆಚ್ಚದ ವಿವರ.

ಯೋಜನೆ ಸಂಖ್ಯೆ:40 ಕುವೆಂಪು ನಗರ 01-04-2018 ರಿಂದ 31-10-2018

ಅನಂ	ಕಾಮಗಾರಿ ವಿವರ	ವೆಚ್ಚ ಲಕ್ಷಗಳಲ್ಲಿ
1	Third party Inspction bill	0.09
2	paid towards surey charges	0.02
3	Maintance of water supply	13.02
	Total	**13.13**

ಆಯುಕ್ತರು,
ನಗರಾಭಿವೃದ್ಧಿ ಪ್ರಾಧಿಕಾರ,
ಬೆಳಗಾವಿ.

ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ ಬೆಳಗಾವಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಬಡಾವಣೆಗಳಲ್ಲಿ ಅಭಿವೃದ್ಧಿ ಕಾಮಗಾರಿಗಳ ವೆಚ್ಚದ ವಿವರ.

ಯೋಜನೆ ಸಂಖ್ಯೆ:56 ಶ್ರೀ ಎಚ್ ಡಿ ಕುಮಾರಸ್ವಾಮಿ ಬಡಾವಣೆ 01-04-2018 ರಿಂದ 31-10-2018

ಅನಂ	ಕಾಮಗಾರಿ ವಿವರ	ವೆಚ್ಚ ಲಕ್ಷಗಳಲ್ಲಿ
1	Street Light and Water Supply (HESCOM)	1.9
2	Repairs to water supply distribution Main of 160 mm	3.12
3	Name plate preparing and fitting	4.74
4	Maitainance of Street Light	0.88
5	Maintainance of Water Supply	0.85
6	Street Light and Water Supply (HESCOM)	1.71
7	Street Light and Water Supply (HESCOM)	0.62
8	Maitainance of Street Light	1.06
9	Street Light and Water Supply (HESCOM)	0.56
10	Maitainance of Street Light	0.17
11	Third party Inspction bill vrious works	0.14
12	Maintainance of Water Supply	1.98
13	Street Light and Water Supply (HESCOM)	1.97
	Total	**19.7**

ಆಯುಕ್ತರು,
ನಗರಾಭಿವೃದ್ಧಿ ಪ್ರಾಧಿಕಾರ,
ಬೆಳಗಾವಿ.

ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ ಬೆಳಗಾವಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಬಡಾವಣೆಗಳಲ್ಲಿ ಅಭಿವೃದ್ಧಿ ಕಾಮಗಾರಿಗಳ ವೆಚ್ಚದ ವಿವರ.

ಯೋಜನೆ ಸಂಖ್ಯೆ:17 ಅನಗೋಳ 01-04-2018 ರಿಂದ 31-10-2018

ಅನಂ	ಕಾಮಗಾರಿ ವಿವರ	ವೆಚ್ಚ ಲಕ್ಷಗಳಲ್ಲಿ
1	Copntruction of compound wall for additional hieght at Janata Colony Rukmini Nagar	25.00
	Total	**25.00**

ಆಯುಕ್ತರು,
ನಗರಾಭಿವೃದ್ಧಿ ಪ್ರಾಧಿಕಾರ,
ಬೆಳಗಾವಿ.

ಕರ್ನಾಟಕ ವಿಧಾನ ಸಭೆ

01.	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	886
02.	ಸದಸ್ಯರ ಹೆಸರು	:	ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸೊರಬ)
03.	ಉತ್ತರಿಸುವ ದಿನಾಂಕ	:	12.12.2018
04.	ಉತ್ತರಿಸುವ ಸಚಿವರು	:	ಉಪ ಮುಖ್ಯಮಂತ್ರಿಗಳು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಸೊರಬ ವಿಧಾನಸಭಾ ಕ್ಷೇತ್ರದಲ್ಲಿ ಇರುವ ಪೊಲೀಸ್ ಠಾಣೆಗಳಲ್ಲಿ ಸಿಬ್ಬಂದಿಗಳ ಕೊರತೆ ಇದೆಯೇ;	ಸೊರಬ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ 2 ಪೊಲೀಸ್ ಠಾಣೆಗಳು ಒಳಪಟ್ಟಿದ್ದು, ಸದರಿ ಪೊಲೀಸ್ ಠಾಣೆಗಳ ಬಲಾಬಲದ ಮಾಹಿತಿಯು ಕೆಳಕಂಡಂತೆ ಇರುತ್ತದೆ:-
ಆ)	ಕೊರತೆ ಇದ್ದಲ್ಲಿ, ಸಿಬ್ಬಂದಿಗಳನ್ನು ನಿಯೋಜಿಸಲು ಯಾವ ಕ್ರಮ ತೆಗೆದುಕೊಳ್ಳಲಾಗಿದೆ;	

ಕ್ರ. ಸಂ.	ಠಾಣೆಯ ಹೆಸರು	ಹುದ್ದೆ	ಮಂಜೂರಾತಿ ಬಲ	ಹಾಲಿ ಬಲ	ರಿಕ್ತ ಸ್ಥಾನ
1.	ಸೊರಬ	ಪಿಎಸ್ಐ	2	2	-
		ಎಎಸ್ಐ	4	1	3
		ಸಿಹೆಚ್‌ಸಿ	12	10	2
		ಸಿಪಿಸಿ	24	21	3
2.	ಆನವಟ್ಟಿ	ಪಿಎಸ್ಐ	1	1	-
		ಎಎಸ್ಐ	4	1	3
		ಸಿಹೆಚ್‌ಸಿ	9	9	-
		ಸಿಪಿಸಿ	18	18	-
	ಒಟ್ಟು		**74**	**63**	**11**

ಸೊರಬ ಮತ್ತು ಆನವಟ್ಟಿ ಪೊಲೀಸ್ ಠಾಣೆಗಳಲ್ಲಿ ಪ್ರಸ್ತುತ ವಿವಿಧ ವೃಂದದ 11 ಹುದ್ದೆಗಳು ಖಾಲಿ ಇದ್ದು, ಇದರಲ್ಲಿ ಎ.ಎಸ್.ಐ ಮತ್ತು ಹೆಚ್.ಸಿ. ವೃಂದದ 8 ಹುದ್ದೆಗಳು ಮುಂಬಡ್ತಿ ಹುದ್ದೆಗಳಾಗಿರುತ್ತವೆ. ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿನ ಶ್ರೀ ಬಿ.ಕೆ. ಪವಿತ್ರ ಪ್ರಕರಣದ ಹಿನ್ನೆಲೆಯಲ್ಲಿ ಮುಂಬಡ್ತಿ ಪ್ರಕ್ರಿಯೆಯನ್ನು ಪ್ರಸ್ತುತ ತಡೆಹಿಡಿಯಲಾಗಿದೆ.

ಸೊರಬ ಪೊಲೀಸ್ ಠಾಣೆಯಲ್ಲಿ ಖಾಲಿ ಇರುವ 3 ಸಿಪಿಸಿ ಹುದ್ದೆಗಳನ್ನು ಒಳಗೊಂಡಂತೆ ಶಿವಮೊಗ್ಗ ಜಿಲ್ಲೆಗೆ ಸಂಬಂಧಿಸಿದಂತೆ ಒಟ್ಟು 45 ಸಿಪಿಸಿ ಹುದ್ದೆಗಳ ನೇರ ನೇಮಕಾತಿ ಪ್ರಕ್ರಿಯೆ ಚಾಲ್ತಿಯಲ್ಲಿದೆ.

ಒಇ 237 ಪೊಸಿಇ 2018

(ಡಾ: ಜಿ. ಪರಮೇಶ್ವರ)
ಉಪ ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖೆ	:	**835**
ಸದಸ್ಯರ ಹೆಸರು	:	**ಶ್ರೀ ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ್(ಇಂಡಿ)**
ಉತ್ತರಿಸುವ ದಿನಾಂಕ	:	**12.12.2018**
ಉತ್ತರಿಸುವ ಸಚಿವರು	:	**ಲೋಕೋಪಯೋಗಿ ಸಚಿವರು**

ಅ)	ರಾಜ್ಯ ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಮೇಲ್ದರ್ಜೇಗೇರಿಸಲು ಯೋಜನಾ ವರದಿ ಮತ್ತು ಕಾರ್ಯ ಸಾಧ್ಯತೆ ಬಗ್ಗೆ ಕೇಂದ್ರ ಸರ್ಕಾರ ವರದಿ ಕೇಳಿರುವುದು ನಿಜವೇ;	- ಹೌದು -
ಆ)	ಯಾವ ರಾಜ್ಯ ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಮೇಲ್ದರ್ಜೆಗೇರಿಸಲಾಗುವುದು; ಈ ಯೋಜನೆಯ ರೂಪುರೇಷೆಗಳೇನು (ಆದೇಶದ ಪ್ರತಿ ನೀಡುವುದು)	2015-16 ಹಾಗೂ 2016-17 ನೇ ಸಾಲಿನಲ್ಲಿ ಕೇಂದ್ರ ಭೂಸಾರಿಗೆ ಮಂತ್ರಾಲಯವು ರಾಜ್ಯದಲ್ಲಿ 6433.00 ಕಿ.ಮೀ ಉದ್ದದ ರಸ್ತೆಗಳನ್ನು ಯೋಜನಾ ಸಮಾಲೋಚಕರು ತಯಾರಿಸುವ ಯೋಜನಾ ವರದಿಯನ್ನಾಧರಿಸಿ ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಮೇಲ್ದರ್ಜೇಗೇರಿಸಲು ತಾತ್ವಿಕ ಅನುಮೋದನೆ ನೀಡಿರುತ್ತದೆ. ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.
ಇ)	ಈ ಹೆದ್ದಾರಿಗಳ ಯೋಜನಾ ವೆಚ್ಚ ಎಷ್ಟು ಮತ್ತು ಯಾವಾಗ ಪ್ರಕ್ರಿಯೆಗೆ ಚಾಲನೆ ನೀಡಲಾಗುವುದು?(ವಿವರ ನೀಡುವುದು)	ಸದರಿ ರಸ್ತೆಗಳ ಪಂಕ್ತೀಕರಣ ವರದಿಗೆ ಕೇಂದ್ರ ಭೂಸಾರಿಗೆ ಮತ್ತು ಹೆದ್ದಾರಿ ಮಂತ್ರಾಲಯದಿಂದ ಅನುಮೋದನೆ ದೊರೆತ ಬಳಿಕ ಯೋಜನಾ ಕಾರ್ಯಸಾಧ್ಯತಾ ವರದಿಯನ್ನು ತಯಾರಿಸಿ, ಸದರಿ ಯೋಜನಾ ವರದಿಗೆ ಅನುಮೋದನೆ ನೀಡಲಾಗುತ್ತದೆ ಹಾಗೂ ಯೋಜನಾ ವೆಚ್ಚ ನಿರ್ಧರಿಸಲಾಗುತ್ತದೆ. ತದನಂತರ, ರಾಷ್ಟ್ರೀಯ ಹೆದ್ದಾರಿ ವಲಯದ ವಾರ್ಷಿಕ ಕ್ರಿಯಾ ಯೋಜನೆಯಲ್ಲಿ ಈ ರಸ್ತೆಗಳ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಅನುಮೋದನೆ ದೊರೆತ ನಂತರ, ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು. ಎರಡು ಭುಜಗಳನ್ನೊಳಗೊಂಡ ದ್ವಿಪಥ ರಸ್ತೆ ನಿರ್ಮಾಣ ಕಾಮಗಾರಿಗೆ ಪ್ರತಿ ಕಿ.ಮೀಗೆ ರೂ.3.5 - 4.00 ಕೋಟಿ ಅಂದಾಜು ವೆಚ್ಚವಾಗುತ್ತದೆ.

ಸಂಖ್ಯೆ: ಲೋಇ 382 ಸಿಎನ್‌ಹೆಚ್ 2018.

(ಹೆಚ್. ಡಿ. ರೇವಣ್ಣ)
ಲೋಕೋಪಯೋಗಿ ಸಚಿವರು

ಅನುಬಂಧ - 1.

" Inprinciple" approved roads in the state of Karnataka

Slno	Nomenclature of the road	Length (in kms)	Date of approval
1	NH -9 to Narayanpet Road via Mudabi-Harkod-Naryanpet Road	200	01.06.2015
2	Bilikere-Hassan-Belur road	131	26.05.2015
3	Sankeshwar(Gotur)-Kagwad- Athani-Bijapur(SH-12)	180	23.07.2015
4	Bijapur-Yatnal(Karnataka)-guddapur-Jatta-junction ofNH-166 near Nagaj(Maharastra)	47	21.10.2015
5	Ginigera –Gangavati – Manvi-Sindnur-Kalmal-Raichur	173	
6	NH-4Tadas-Kalgatagi-Dharwad-Hebsure –Navalgund-Annigeri to join NH-63.	118	29-01-2016
7	Nargund-Belabaniki-Gajendragad -Kushtagi-Tavargere- Sindhanur(NH-150A)	141	
8	Koppal-Belgatti-Mundargi-Bagevadi-Belhatti-Govandi-Gurdur-Shiggaon	114	
9	Khanapur-Haliyal-Yellapur(NH-52)	101	
10	Shringeri-Agalagundi-Jayapur-Balehonnur-Hyrambi-Aldur-Nadipur	74	
11	Mysore-(NH-766)-Bannur-Malavalli(NH948)	45	
12	Junction of NH-161 near Nizampet-Narayankhed-Bidar (Junction at NH-50 in Karnataka)	60	16.02.2016
13	Hyderabad -Moinabad-Chevalla-Manneguda-Kodangal=Karnataka border upto junction of NH-50 near Yadgir	60	
14	Yelapura(NH-52)-Sidapura-Talaguppa-Bhatkal	219	23-02-2016
15	Belgaum-Bagalkot-Raichur	336	
16	Sirsi-Haveri- Kudlagi-Molkalmur	247	
17	Kalpetta- Manandawadi–H.D.Kote–Jaipur–Mysore	90	
18	Chintamani(NH-69)-Chelur-Rayachervu-Tanakal(AP)(NH42)	55	
19	Molkalmur(NH150A) -Rayadurga-Ananthpura.(NH-44)	12	
20	Tumkur-Kortagere-Pavagada-Kalyandurga-Veparalla	116	
21	Ramnagar-Sadhashivgad	118	
22	Davangere (NH-48)-Channagiri(NH-369)	60	
23	Chitradurga(NH-48)-Challekere-Pavagada-Penukonda(AP)(NH-44)	120	
24	Gulbarga(NH-50)-Umerga(NH-65)	64	
25	Sankeshwar(NH-48)-Gokak-Yargetta -Munvalli-Nargund(NH-52)	127	

Slno	Nomenclature of the road	Length (in kms)	Date of approval
26	Hunasanahalli-Kodihalli-Kanakapura-Ramanagara-Magadi-Pavagada to AP	170	24.02.2016
27	Shimoga to NH-4 via Shikaripur, Hangal, Tadasa	173	7.03.2016
28	NH-4 Shimoga-Honnahalli-Malebennur-Harihara NH-206	83	
29	Karkala-Moodbidri-BC road(including overlapping stretch of 19 kms of existing NH169)	26	19.04.2016
30	B.C road-Kaikamba-Kateel - Mulki road	48.1	
31	Thokottu-Mudipu-Melkar	26.53	
32	Mariyamanahalli-Itagi-Harapanahalli-Harihara junction with NH-4	104	
33	NH-206 at km 282.20 near Sagara to NH-766C at 45.300 near Markutka via Huvinalli, Holebaglu, Kalasvalli, Sigandooru, Backodu	74	
34	Stretch from Kuppam on NH-42(AP) - Kolar on NH-75 (Karnataka) (Length in AP=25 kms and Karnataka=40 kms)	40	13.06.2016
35	Madakasire-Rolla (Ap/Karnataka border) - Sira in the state of Karnataka (Total length= 67 kms. AP = 38 kms, Karnataka = 29 kms)	29	
36	NH-9 connecting Tembhurni-Pandharpur-Mangalwedha-Vijapur Karnataka border (Maharashtra=125kms, Karnataka=15 kms)	15	
37	Jahirabad-Bidar-Deglur (Maharashtra=100kms, Karnataka=58 kms, Telanagana=25 kms)	58	
38	Joining NH-65 - Murval -Aalur- Akkalkote- Indi - Jhumuki (NH-13)-Bijapur border (NH 13) (Maharashtra=150kms, Karnataka=63kms)	63	
39	Joining NH-65 - Jahirabad - Virur- (NH-50) - Bhauki (NH 52) - Nilanga - Nitur- Latur- (Maharashtra=100kms, Karnataka=42kms)	42	
40	Rajura-Korpana-Adilabad road (Maharashtra=61 kms, Karnataka=21 kms)	21	
41	NH-66 Sawantwadi-Aajara-Gadhiglanj-NH 4 (Maharashtra=102kms, Karnataka=4 kms)	4	
42	Vengurla-Math-Amboli-Chandgarh-Belgaon (Maharashtra=100kms, Karnataka=11 kms)	11	

Slno	Nomenclature of the road	Length (in kms)	Date of approval
43	Karwar-Kaiga-Mundgod-Savanur-Gadag-Gajendragad	318	
44	Dandeli-Haliyal-Dharwad-Saundatti-Mudhol-Jamkandi-Vijyapura	270	
45	Nargund-Gadag-Mundaragi-Itgi-Jagalur	260	
46	Afzalpur-Almel-Indi	42	
47	Adoni-Raravi-Shiraguppa (Karnataka=19km, Telegana-25km)	19	
48	Gangavati-Tavaragera-Mudgal	70	
49	Junction of NH-50 near Hungund-Aihole-Pattadakal-Badami-Ramdurga	85	
50	Stretch starting from near Gurlapur-Mudhol-Bilgi Cross on NH-52	75	
51	Lingasugur-Rodalabanda-Narayanapur-Nalatwad-Muddebihal-Huvinahippargi-Devarhippargi- Tamba- Junction of SH-41 and SH-34	167	
52	Indi-Zalaki-Chadchan-Shiradona-Maharashtra Border	48	
53	Chincholi-Sedam-Chitapur-Wadi-Nalwar-Sannati-Shahapur (NH to NH link road)	170	
54	Jath (Mah) Athani-near Gokak (Karnataka=92km, Maharashtra=26km)	92	
55	Torangal-Sandur-Kudlagi	40	21-11-2016
56	Bhalki-Basavakalyan (upto Jn of NH-65)	47	
57	Belur to Chickmagalur	20	
58	Channarayapattana-Holenarasipur-Arkalgud-Kodlipet-Madikeri	138	
59	Kollegala-Hanur-MM Hills-Palar road-Tamilnadu- Border extended upto mettur in Tamil Nadu (Karnataka=91km, Tamil Nadu=30km)	91	
60	Manipal-Karkala	18	
61	Ramasamudra-Unjalkate	32	
62	Belthangadi-Shiradi Via Dharmasthala	25	
63	Gundya-Subramanya	17	
64	Kundapur-Koteshwar-Halady-Someshwara-Agumbe-Sringeri	88	
65	Gundlupet (NH-212) to Chamarajanagar (NH-150A)	35	
66	Manekhalli-Chincholi-Mariyan-Tandur-Mehboobnagar (Karnataka=54km, Telengana=96km)	54	
67	Madikeri-Virajpet-Makutta (in Karnataka) and connecting Kannur (in Kerala) (Karnataka=45km, Kerala=55km)	45	

Slno	Nomenclature of the road	Length (in kms)	Date of approval
68	Mulabagal-Taylur	24	7.12.2016
69	Mangalore old port-NH 66 near Kollur	7.6	
70	Maharashtra border - Indi - Vijayapura	42	
71	Hosdurg-Panathur-Bhagamandala-Madikeri in Karnataka state	53	24.03.2017
72	Cherkala- Kalladka	23	
73	Vadakkenchery-Pollachi	22	
	TOTAL in kms	**6433**	

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	319
ಸದಸ್ಯರ ಹೆಸರು	:	ಶ್ರೀ ಸಿ.ಟಿ. ರವಿ (ಚಿಕ್ಕಮಗಳೂರು)
ಉತ್ತರಿಸುವ ದಿನಾಂಕ	:	12.12.2018
ಉತ್ತರಿಸುವ ಸಚಿವರು	:	ಮಾನ್ಯ ಲೋಕೋಪಯೋಗಿ ಸಚಿವರು

ಕ್ರ. ಸಂ	ಪ್ರಶ್ನೆಗಳು	ಉತ್ತರಗಳು
ಅ	ಚಿಕ್ಕಮಗಳೂರು ನಗರದ ಆದಿಚುಂಚನಗಿರಿ ವೃತ್ತದಿಂದ ಬಿಳಿಕೆರೆವರೆಗಿನ ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಮೇಲ್ದರ್ಜೆಗೇರಿಸಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಿದ್ದು, ಅದರಲ್ಲಿ ಬೇಲೂರು- ಬಿಳಿಕೆರೆ ರಸ್ತೆಯನ್ನು ಮಾತ್ರ ರಾಷ್ಟ್ರೀಯ ಹೆದ್ದಾರಿ-373 ನ್ನಾಗಿ ಮೇಲ್ದರ್ಜೆಗೇರಿಸಿದ್ದು, ಬೇಲೂರಿನಿಂದ ಚಿಕ್ಕಮಗಳೂರಿಗೆ ಸಂಪರ್ಕ ಕಲ್ಪಿಸುವ 24 ಕಿಲೋಮೀಟರ್ ರಸ್ತೆ ಕೈಬಿಟ್ಟು ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಆ	ಬಂದಿದ್ದಲ್ಲಿ, ಕೈಬಿಟ್ಟು ಹೋಗಲು ಕಾರಣಗಳೇನು; (ವಿವರ ನೀಡುವುದು)	ಕೇಂದ್ರ ಭೂಸಾರಿಗೆ ಮತ್ತು ಹೆದ್ದಾರಿ ಮಂತ್ರಾಲಯವು ದಿನಾಂಕ 26.05.2015 ರಂದು ಬಿಳಿಕೆರೆ ಯಿಂದ ಬೇಲೂರು ರಸ್ತೆಯನ್ನು ವಿಸ್ತೃತ ಯೋಜನಾ ವರದಿಯನ್ನಾಧರಿಸಿ ರಾಷ್ಟ್ರೀಯ ಹೆದ್ದಾರಿಯನ್ನಾಗಿ ಘೋಷಿಸಲಾಗುವುದೆಂಬ ಷರತ್ತಿನೊಂದಿಗೆ ತಾತ್ವಿಕ ಅನುಮೋದನೆ ನೀಡಿರುತ್ತದೆ. ಸದರಿ ರಸ್ತೆಯೊಂದಿಗೆ ಬೇಲೂರು ನಿಂದ ಚಿಕ್ಕಮಗಳೂರು ವರೆಗೂ 25 ಕಿ.ಮೀ. ಉದ್ದದ ರಸ್ತೆಯನ್ನು ತಾತ್ವಿಕ ಅನುಮೋದನೆ ನೀಡಲು ಮುಖ್ಯ ಇಂಜಿನಿಯರ್, ರಾಷ್ಟ್ರೀಯ ಹೆದ್ದಾರಿಗಳು ರವರಿಂದ ದಿನಾಂಕ 06.08.2016 ರಂದು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಸದರಿ ಪ್ರಸ್ತಾವನೆಗೆ ಕೇಂದ್ರ ಸರ್ಕಾರವು ದಿನಾಂಕ 21.11.2016ರಲ್ಲಿ ವಿಸ್ತೃತ ಯೋಜನಾ ವರದಿಯನ್ನಾಧರಿಸಿ ರಾಷ್ಟ್ರೀಯ ಹೆದ್ದಾರಿಯನ್ನಾಗಿ ಘೋಷಿಸಲಾಗುವುದೆಂಬ ಷರತ್ತಿನೊಂದಿಗೆ ತಾತ್ವಿಕ ಅನುಮೋದನೆ ನೀಡಿರುತ್ತದೆ. ಬೇಲೂರು ನಿಂದ ಚಿಕ್ಕಮಗಳೂರುವರೆಗಿನ ಅಭಿವೃದ್ಧಿ ಕಾಮಗಾರಿಗೆ ವಿಸ್ತೃತ ಯೋಜನಾ ವರದಿಯನ್ನು ತಯಾರಿಸಿ ದಿನಾಂಕ 27.11.2017 ರಂದು ರೂ.206.49 ಕೋಟಿಗಳಿಗೆ ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದ್ದು, ಆದರೆ ಕೇಂದ್ರ ಸರ್ಕಾರದಿಂದ ಇನ್ನೂ ಅನುಮೋದನೆ ದೊರತಿರುವುದಿಲ್ಲ. ಆದ್ದರಿಂದ ಸದರಿ ರಸ್ತೆಯನ್ನು ಇನ್ನೂ ರಾಷ್ಟ್ರೀಯ ಹೆದ್ದಾರಿಯಾಗಿ ಘೋಷಿಸಿರುವುದಿಲ್ಲ.

.2..

ಇ	ಕೈಬಿಟ್ಟುಹೋಗಿರುವ 24 ಕಿ.ಮೀ. ರಸ್ತೆಯನ್ನು ಸೇರಿಸಿ ಬಿಳಿಕೆರೆ–ಬೇಲೂರು ಹೆದ್ದಾರಿ–373 ನ್ನು ಚಿಕ್ಕಮಗಳೂರು ಆದಿಚುಂಚನಗಿರಿ ವೃತ್ತದವರೆಗೆ ವಿಸ್ತರಿಸಲು ಪುನ: ಕೇಂದ್ರಕ್ಕೆ ಪ್ರಸ್ತಾವನೆ ಸಲ್ಲಿಸಲು ಕೈಗೊಂಡಿರುವ ಕ್ರಮಗಳೇನು;	ಈಗಾಗಲೇ ಮುಖ್ಯ ಅಭಿಯಂತರರು, ರಾಷ್ಟ್ರೀಯ ಹೆದ್ದಾರಿಗಳು, ಬೆಂಗಳೂರು ಇವರಿಂದ ದಿನಾಂಕ 19.11.2018 ರಂದು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಅನುಮೋದನೆ ನಿರೀಕ್ಷಿಸಲಾಗಿದೆ.
ಈ	ಹಾಗಿದ್ದಲ್ಲಿ, ಯಾವಾಗ ಪ್ರಸ್ತಾವನೆ ಸಲ್ಲಿಸಲಾಗುವುದು? (ವಿವರ ಒದಗಿಸುವುದು)	

ಸಂಖ್ಯೆ: ಲೋಇ 380 ಸಿಎನ್‌ಹೆಚ್ 2018.

(ಹೆಚ್. ಡಿ. ರೇವಣ್ಣ)
ಲೋಕೋಪಯೋಗಿ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	338
ಸದಸ್ಯರ ಹೆಸರು	:	ಶ್ರೀ ಸಿ.ಟಿ. ರವಿ (ಚಿಕ್ಕಮಗಳೂರು)
ಉತ್ತರಿಸುವ ದಿನಾಂಕ	:	12.12.2018
ಉತ್ತರಿಸುವ ಸಚಿವರು	:	ಲೋಕೋಪಯೋಗಿ ಸಚಿವರು

<table>
<tr><th>ಕ್ರಮ ಸಂಖ್ಯೆ</th><th>ಪ್ರಶ್ನೆಗಳು</th><th>ಉತ್ತರಗಳು</th></tr>
<tr><td>ಅ</td><td>ಕೇಂದ್ರೀಯ ರಸ್ತೆ ನಿಧಿಯಿಂದ ಚಿಕ್ಕಮಗಳೂರು ವಿಧಾನಸಭಾ ಕ್ಷೇತ್ರಕ್ಕೆ ಮಂಜೂರಾಗಿರುವ ಅನುದಾನವೆಷ್ಟು; (ಮಂಜೂರಾದ ದಿನಾಂಕಗಳ ಸಮೇತ ವಿವರ ನೀಡುವುದು)</td><td>ಕೇಂದ್ರೀಯ ರಸ್ತೆ ನಿಧಿಯಿಂದ 2016-17ನೇ ಸಾಲಿಗೆ ಚಿಕ್ಕಮಗಳೂರು ವಿಧಾನಸಭಾ ಕ್ಷೇತ್ರಕ್ಕೆ ಮಂಜೂರಾಗಿರುವ ಅನುದಾನದ ವಿವರ ಈ ಕೆಳಕಂಡಂತಿದೆ:
<table>
<tr><th>ಮಂಜೂರಾದ ಮೊತ್ತ</th><th>ಮಂಜೂರಾದ ದಿನಾಂಕ</th></tr>
<tr><td>250.00 ಲಕ್ಷ</td><td>02-11-2016</td></tr>
</table>
ಕೇಂದ್ರೀಯ ರಸ್ತೆ ನಿಧಿಯಿಂದ 2017-18ನೇ ಸಾಲಿಗೆ ಚಿಕ್ಕಮಗಳೂರು ವಿಧಾನಸಭಾ ಕ್ಷೇತ್ರಕ್ಕೆ ಮಂಜೂರಾಗಿರುವ ಅನುದಾನದ ವಿವರ ಈ ಕೆಳಕಂಡಂತಿದೆ:
<table>
<tr><th>ಮಂಜೂರಾದ ಮೊತ್ತ</th><th>ಮಂಜೂರಾದ ದಿನಾಂಕ</th></tr>
<tr><td>7205.00 ಲಕ್ಷ</td><td>05-02-2018</td></tr>
</table>
</td></tr>
<tr><td>ಆ</td><td>ಹಾಗಿದ್ದಲ್ಲಿ, ಮಂಜೂರಾದ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಕೇಂದ್ರ ಸರ್ಕಾರ ನಿಗಧಿಪಡಿಸಿರುವ ಕಾಲಮಿತಿ ಎಷ್ಟು; ಕೇಂದ್ರ ಸರ್ಕಾರ ನಿಗಧಿಪಡಿಸಿರುವ ಕಾಲಮಿತಿಯಲ್ಲಿ ಕಾಮಗಾರಿ ಅನುಷ್ಠಾನಗೊಳಿಸಲಾಗುವುದೇ;</td><td rowspan="3">ಮಂಜೂರಾದ ಕಾಮಗಾರಿಗಳ ತಾಂತ್ರಿಕ ಮಂಜೂರಾತಿಯನ್ನು ನಾಲ್ಕು ತಿಂಗಳೊಳಗಾಗಿ ಪಡೆದುಕೊಳ್ಳಲು ಕೇಂದ್ರ ಭೂಸಾರಿಗೆ ಮತ್ತು ಹೆದ್ದಾರಿ ಮಂತ್ರಾಲಯವು ಷರತ್ತು ನಿಗಧಿಪಡಿಸಿರುತ್ತದೆ. 2016-17ನೇ ಸಾಲಿಗೆ ಚಿಕ್ಕಮಗಳೂರು ವಿಧಾನಸಭಾ ಕ್ಷೇತ್ರಕ್ಕೆ ಮಂಜೂರಾಗಿರುವ ಅನುದಾನದಲ್ಲಿ ಕಾಮಗಾರಿಗಳನ್ನು ನಿಗಧಿತ ಕಾಲಮಿತಿಯಲ್ಲಿ ಅನುಷ್ಠಾನಗೊಳಿಸಲಾಗಿದೆ.

2017-18ನೇ ಸಾಲಿಗೆ ಚಿಕ್ಕಮಗಳೂರು ವಿಧಾನಸಭಾ ಕ್ಷೇತ್ರಕ್ಕೆ ಮಂಜೂರಾಗಿದ್ದ ಸಿ.ಆರ್.ಎಫ್. ಕಾಮಗಾರಿಗಳನ್ನು ಅನುದಾನದ ಕೊರತೆಯಿಂದ ನಿಗಧಿತ ಅವಧಿಯಲ್ಲಿ ಅನುಷ್ಠಾನಗೊಳಿಸಲು ಸಾಧ್ಯವಾಗಿರುವುದಿಲ್ಲ.

ಕೇಂದ್ರ ರಸ್ತೆ ನಿಧಿಯಿಂದ ರಾಜ್ಯ ಸರ್ಕಾರಕ್ಕೆ ಮಂಜೂರಾಗುವ ಸಿ.ಅರ್.ಎಫ್. ಕಾಮಗಾರಿಗಳಿಗೆ ಸಂಬಂಧಿಸಿದಂತೆ ಮೊದಲು ರಾಜ್ಯ ಸರ್ಕಾರವು ಅನುದಾನವನ್ನು ಬಿಡುಗಡೆ ಮಾಡಿ ಕಾಮಗಾರಿಯನ್ನು ಕೈಗೊಂಡು ತದನಂತರ ಕೇಂದ್ರ ಸರ್ಕಾರದಿಂದ ಮರುಪಾವತಿ ಪಡೆದುಕೊಳ್ಳಬೇಕಾಗಿದ್ದು, ಆದರೆ ಕೇಂದ್ರ ಸರ್ಕಾರದಿಂದ ಪ್ರತಿವರ್ಷಕ್ಕೆ 500.00 ಕೋಟಿಗಳು ಮಾತ್ರ ಈ ಉದ್ದೇಶಕ್ಕೆ ಬಿಡುಗಡೆಯಾಗಲಿರುವುದರಿಂದ, ಈ ಸಂಬಂಧ ಅನುದಾನಕ್ಕಾಗಿ ಆರ್ಥಿಕ ಇಲಾಖೆಯನ್ನು ಕೋರಲಾಗಿ, ಆರ್ಥಿಕ ಇಲಾಖೆಯು ಸಿ.ಆರ್.ಎಫ್. ಕಾಮಗಾರಿಗಳನ್ನು ವಾರ್ಷಿಕ 500.00 ಕೋಟಿಗಳ ಮಿತಿಯೊಳಗೆ ಕೈಗೊಳ್ಳುವಂತೆ ಸೂಚಿಸಿರುವುದರಿಂದ, ಸಿ.ಆರ್.ಎಫ್. ನಿಧಿಯಿಂದ ಮಂಜೂರಾದ ಎಲ್ಲಾ ಕಾಮಗಾರಿಗಳನ್ನು ಟೆಂಡರ್ ಕರೆದು ಅನುಷ್ಠಾನಗೊಳಿಸಲು ಸಾಧ್ಯವಾಗಿರುವುದಿಲ್ಲ.
ಅನುದಾನ ಲಭ್ಯವಾದ ನಂತರ ಈ ಬಗ್ಗೆ ಪರಿಶೀಲಿಸಲಾಗುವುದು.</td></tr>
<tr><td>ಇ</td><td>ಮಂಜೂರಾದ ಕಾಮಗಾರಿಗಳಿಗೆ ಇದುವರೆಗೂ ಟೆಂಡರ್ ಕರೆದು ಅನುಷ್ಠಾನಗೊಳಿಸದಿರಲು ಕಾರಣಗಳೇನು</td></tr>
<tr><td>ಈ</td><td>ಯಾವಾಗ ಈ ಕಾಮಗಾರಿಗಳಿಗೆ ಟೆಂಡರ್ ಕರೆದು ಅನುಷ್ಠಾನಗೊಳಿಸಲಾಗುವುದು? (ವಿವರ ಒದಗಿಸುವುದು)</td></tr>
</table>

ಸಂಖ್ಯೆ: ಲೋಇ 381 ಸಿಎಸ್‌ಹೆಚ್ 2018.

(ಹೆಚ್. ಡಿ. ರೇವಣ್ಣ)
ಲೋಕೋಪಯೋಗಿ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖೆ : **899**

ಸದಸ್ಯರ ಹೆಸರು : ಶ್ರೀ ಪ್ರೀತಮ್ ಜೆ ಗೌಡ (ಹಾಸನ)

ಉತ್ತರಿಸುವ ದಿನಾಂಕ : **12.12.2018**

ಉತ್ತರಿಸುವ ಸಚಿವರು : ಲೋಕೋಪಯೋಗಿ ಸಚಿವರು

ಕ್ರಮ ಸಂಖ್ಯೆ	ಪ್ರಶ್ನೆಗಳು	ಉತ್ತರಗಳು
ಅ)	ಕೇಂದ್ರಿಯ ರಸ್ತೆ ನಿಧಿಯಿಂದ ಹಾಸನ ವಿಧಾನ ಸಭಾ ಕ್ಷೇತ್ರಕ್ಕೆ ಮಂಜೂರಾಗಿರುವ ಅನುದಾನವೆಷ್ಟು; ಯಾವಾಗ ಮಂಜೂರಾಗಿರುತ್ತದೆ:	ಕೇಂದ್ರ ರಸ್ತೆ ನಿಧಿಯಿಂದ ಹಾಸನ ವಿಧಾನ ಸಭಾ ಕ್ಷೇತ್ರಕ್ಕೆ ಒಟ್ಟು 7 ಕಾಮಗಾರಿಗಳು ರೂ.42.00 ಕೋಟಿ ಅನುದಾನದಲ್ಲಿ ದಿನಾಂಕ 05.02.2018ರಂದು ಮಂಜೂರಾಗಿರುತ್ತದೆ.
ಆ)	ಮಂಜೂರಾದ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಕೇಂದ್ರ ಸರ್ಕಾರ ನಿಗದಿಪಡಿಸಿರುವ ಕಾಲಮಿತಿ ಎಷ್ಟು; ಕೇಂದ್ರ ಸರ್ಕಾರ ನಿಗದಿಪಡಿಸಿದ ಕಾಲಮಿತಿಯಲ್ಲಿ ಕಾಮಗಾರಿ ಅನುಷ್ಠಾನಗೊಳಿಸಲಾಗುವುದೆ;	ಕೇಂದ್ರ ಸರ್ಕಾರದಿಂದ ಅನುಮೋದನೆಗೊಂಡ ದಿನಾಂಕದಿಂದ ಅನುಮೋದಿತ ಕಾಮಗಾರಿಗಳನ್ನು ಪೂರ್ಣಗೊಳಿಸಲು 24 ತಿಂಗಳ ಕಾಲಮಿತಿಯನ್ನು ನಿಗಧಿಗೊಳಿಸಲಾಗಿರುತ್ತದೆ. ಕೇಂದ್ರ ಸರ್ಕಾರ ನಿಗಧಿಪಡಿಸಿದ ಕಾಲಮಿತಿಯಲ್ಲಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುವುದು.
ಇ)	ಮಂಜೂರಾದ ಕಾಮಗಾರಿಗಳಿಗಾಗಿ ಇದುವರೆಗೂ ಟೆಂಡರ್ ಕರೆದು ಕಾಮಗಾರಿ ಅನುಷ್ಠಾನಗೊಳಿಸದಿರಲು ಕಾರಣವೇನು; ಯಾವಾಗ ಈ ಕಾಮಗಾರಿಗಳಿಗೆ ಟೆಂಡರ್ ಕರೆದು ಅನುಷ್ಠಾನಗೊಳಿಸಲಾಗುವುದು? (ವಿವರ ನೀಡುವುದು)	ಕೇಂದ್ರ ರಸ್ತೆ ನಿಧಿ ಅಡಿಯಲ್ಲಿ ಅನುಮೋದನೆಗೊಂಡ ಎಲ್ಲಾ ಕಾಮಗಾರಿಗಳಿಗೂ ತಾಂತ್ರಿಕ ಮಂಜೂರಾತಿ ನೀಡಿದ್ದು, ಹಾಸನ ವಿಧಾನಸಭಾ ಕ್ಷೇತ್ರದ 7 ಕಾಮಗಾರಿಗಳಿಗೆ ಟೆಂಡರ್ ಮುಖಾಂತರ ಗುತ್ತಿಗೆದಾರರನ್ನು ನಿಗಧಿಪಡಿಸಲಾಗಿದೆ. ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಸಂಖ್ಯೆ: ಲೋಇ 81 ಸಿಆರ್‌ಎಫ್ 2018.

(ಹೆಚ್. ಡಿ. ರೇವಣ್ಣ)
ಲೋಕೋಪಯೋಗಿ ಸಚಿವರು

ಅನುಬಂಧ – 2

ಸಂ	ಕಾಮಗಾರಿಯ ಹೆಸರು	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಗುತ್ತಿಗೆ ಕರಾರು ಸಂಖ್ಯೆ & ದಿನಾಂಕ	ಗುತ್ತಿಗೆ ಕರಾರಿನಂತೆ ಕಾಮಗಾರಿ ಪೂರ್ಣಗೊಳ್ಳಬೇಕಾದ ದಿನಾಂಕ	ಗುತ್ತಿಗೆದಾರರ ಹೆಸರು
1.	ಹಾಸನ ತಾಲ್ಲೂಕು ಎಂ.ಸಿ.ಎಫ್ ನಿಂದ ಸರಸ್ವತಿ ಪ್ರತಿಮೆ ರವರೆಗೆ ಕಿ.ಮೀ.21.00 ರಿಂದ 28.45 ಕಿ.ಮೀರವರೆಗೆ ಎರಡು ಪಥದಿಂದ ನಾಲ್ಕು ಪಥದವರೆಗೆ ಅಭಿವೃದ್ಧಿ,ಅಗಲೀಕರಣ ಹಾಗೂ ಮರು ಡಾಂಬರೀಕರಣ ಕಾಮಗಾರಿ.(CRF-KNT-2017-18-2421 Dt:05.02.2018)	1300.00	219/2018–19 ದಿನಾಂಕ:01/10/2018	31–6–19	ಶ್ರೀ.ಎಸ್. ನಾರಾಯಣರೆಡ್ಡಿ, ಚನ್ನರಾಯಪಟ್ಟಣ.
2.	ಹಾಸನ ತಾಲ್ಲೂಕು ಹಳೇಬೀಡು–ಆನೆಚಾಕೂರು ರಸ್ತೆ ಕಿ.ಮೀ.28.45 ರಿಂದ 30.50 ಕಿ.ಮೀ (ಸರಸ್ವತಿ ವೃತ್ತದಿಂದ ಗೊರೂರು ವೃತ್ತ (ಎಸ್.ಹೆಚ್–71) ದವರೆಗೆ ಅಭಿವೃದ್ಧಿ ಕಾಮಗಾರಿ. (CRF-KNT-2017-18-2422 Dt:05.02.2018)	200.00	182/2018–19 ದಿನಾಂಕ:17/09/2018	16–03–19	ಶ್ರೀ.ರಮೇಶ್‌ಕುಮಾರ್.ಕೊಥಾರಿ, ಹಾಸನ
3.	ಹಾಸನ ತಾಲ್ಲೂಕು ಬಾಗಲಕೋಟೆ ಬಿಳಿಗಿರಿರಂಗನಬೆಟ್ಟ ರಸ್ತೆ (ರಾಜ್ಯ ಹೆದ್ದಾರಿ–57) ಕಿಮೀ 494.34 ರಿಂದ 495.99 ರವರೆಗೆ ಹಾಸನ ಹೊಸ ಬಸ್ ನಿಲ್ದಾಣದಿಂದ ಎನ್.ಹೆಚ್–75 ಬೈಪಾಸ್ ರವರೆಗೆ ಅಭಿವೃದ್ಧಿ ಕಾಮಗಾರಿ. (CRF-KNT-2017-18-2423 Dt:05.02.2018)	400.00	181/2018–19 ದಿನಾಂಕ:17/09/2018	16–03–19	ಶ್ರೀ.ರಮೇಶ್‌ಕುಮಾರ್.ಕೊಥಾರಿ, ಹಾಸನ
4.	ಹಾಸನ ತಾಲ್ಲೂಕು ನಾಲ್ಕು ಪಥದ ರಸ್ತೆ ಕಿ.ಮೀ.0.00 ರಿಂದ 3.00 ರವರೆಗೆ ಮಾರ್ಗ ಬಿ.ಎಂ. ರಸ್ತೆ, ಹಬೀಬಿಯಾ ಸಾಮಿಲ್, ರಾಜಕುಮಾರ್ ನಗರ ಸೇರುವ ರಸ್ತೆ 80 ಫೀಟ್ ರಿಂಗ್ ರಸ್ತೆ (ಹಾಸನ ನಗರ ಸಂಪರ್ಕಿಸುವ ರಸ್ತ) ಅಭಿವೃದ್ಧಿ ಕಾಮಗಾರಿ. (CRF-KNT-2017-18-2430 Dt:05.02.2018)	1000.00	183/2018–19 ದಿನಾಂಕ:17/09/2018	16–03–19	ಶ್ರೀ.ಹೆಚ್.ಎನ್.ರಾಮೇಗೌಡ, ಚನ್ನರಾಯಪಟ್ಟಣ.
5.	ಹಾಸನ ನಗರದ ಪ್ರಸ್ತುತ ನಾಲ್ಕು ಪಥದ ರಸ್ತೆ ಡೈರಿ ವೃತ್ತದಿಂದ ಮಾರ್ಗ ಸಾಲಗಾಮೆ ರಸ್ತೆಯಿಂದ ಬಿಬಿ ರಸ್ತೆ ಸೇರುವ ರಸ್ತೆ ಕಿ.ಮೀ.0.00 ರಿಂದ 3.18 ಕಿ.ಮೀರವರೆಗೆ ಅಭಿವೃದ್ಧಿ ಹಾಗೂ ಮರು ಡಾಂಬರೀಕರಣ ಕಾಮಗಾರಿ. (CRF-KNT-2017-18-2431 Dt:05.02.2018)	500.00	188/2018–19 ದಿನಾಂಕ:17/09/2018.	16–03–19	ಶ್ರೀ. ಕೆ.ಎಸ್. ಅಶ್ವತ್‌ನಾರಯಣಗೌಡ, ಚನ್ನರಾಯಪಟ್ಟಣ.
6.	ಹಾಸನ ನಗರದ ರಿಂಗ್ ರಸ್ತೆಯಿಂದ ಯಡೆಯೂರು ಹೊನ್ನೇನಹಳ್ಳಿ ಚಿಟ್ನಹಳ್ಳಿ ನಿಡುಡಿ ಚೀರನಹಳ್ಳಿ ಮಾರ್ಗ ತಿಪಟೂರು–ಹಾಸನ ರಸ್ತೆ ಸೇರುವ ರಸ್ತೆ ಕಿ.ಮೀ.0.00 ರಿಂದ 1.20, ಕಿ.ಮೀ.1.53 ರಿಂದ 3.40 ಕಿ.ಮೀ ಹಾಗೂ 3.73 ರಿಂದ 7.40 ಕಿ.ಮೀರವರೆಗೆ (ಜಿ.ಮು.ರ) ಅಭಿವೃದ್ಧಿ ಮತ್ತು ಅಗಲೀಕರಣ ಕಾಮಗಾರಿ. (CRF-KNT-2017-18-2434 Dt:05.02.2018)	500.00	186/2018–19 ದಿನಾಂಕ:17/09/2018.	16–03–19	ಶ್ರೀ. ಕೆ.ಎಸ್. ಅಶ್ವತ್‌ನಾರಯಣಗೌಡ, ಚನ್ನರಾಯಪಟ್ಟಣ.
7.	ಡೈರಿ ವೃತ್ತದಿಂದ ಮಾರ್ಗ ಭಗತ್‌ಸಿಂಗ್ ರಸ್ತೆ, ಚಿಕ್ಕಹೊನ್ನೇನಹಳ್ಳಿ, ಎಂ.ಸಿ.ಎಫ್ ಕ್ವಾಟ್ರಸ್ ಹಿಂಬಾಗ, ದೊಡ್ಡಕೊಂಡಗುಳ ರಸ್ತೆ ಸೇರುವ ರಸ್ತೆ ಗೌರಿಪುರ ಕಿ.ಮೀ. 0.00 ರಿಂದ 6.50 ಕಿ.ಮೀ.ರವರೆಗೆ (ಜಿ.ಮು.ರ) ಅಭಿವೃದ್ಧಿ ಕಾಮಗಾರಿ. (CRF-KNT-2017-18-2435 Dt:05.02.2018)	300.00	185/2018–19 ದಿನಾಂಕ:17/09/2018.	16–03–19	ಶ್ರೀ.ತಿಮ್ಮೇಗೌಡ ರಾಯಿಗೌಡ, ಚನ್ನರಾಯಪಟ್ಟಣ.
	ಒಟ್ಟು	**4200.00**			

ಕರ್ನಾಟಕ ವಿಧಾನ ಸಭೆ

ಚುಕ್ಕೆಗುರುತ್ತಿಲ್ಲದ ಪ್ರಶ್ನೆ ಸಂಖ್ಯೆ : **876**
ಸದಸ್ಯರ ಹೆಸರು : **ಶ್ರೀ ಹೆಚ್. ಹಾಲಪ್ಪ (ಸಾಗರ)**
ಉತ್ತರಿಸುವ ದಿನಾಂಕ : 12-12-2018
ಉತ್ತರಿಸುವ ಸಚಿವರು : ಮಾನ್ಯ ಲೋಕೋಪಯೋಗಿ ಸಚಿವರು.

ಕ್ರ.ಸಂ	ಪ್ರಶ್ನೆಗಳು	ಉತ್ತರಗಳು
ಅ)	ಸರ್ಕಾರದ ಶಾಲಾ ಸೇತು ಬಂದ ಯೋಜನೆಯಡಿಯಲ್ಲಿ ಗ್ರಾಮೀಣ ಪ್ರದೇಶದಲ್ಲಿ ಚಿಕ್ಕ ಹಳ್ಳಗಳಿಗೆ ಕಾಲು ಸಂಕಗಳನ್ನು ನಿರ್ಮಿಸುವ ಯೋಜನೆ ಯಾವ ಹಂತದಲ್ಲಿದೆ;	ಶಾಲಾ-ಸಂಪರ್ಕ-ಸೇತು ಯೋಜನೆಯಡಿ ಸಂಪರ್ಕ ಸೇತುವೆಗಳ ನಿರ್ಮಾಣದ ಕ್ರಿಯಾ ಯೋಜನೆ ತಯಾರಿಕಾ ಹಂತದಲ್ಲಿದೆ.
ಆ)	ಸದರಿ ಯೋಜನೆಯ ಅನುಷ್ಠಾನಕ್ಕೆ ಇರುವ ನಿಯಮಗಳೇನು;(ಪೂರ್ಣ ವಿವರ ಒದಗಿಸುವುದು)	ಸದರಿ ಯೋಜನೆಯ ಅನುಷ್ಠಾನಗೊಳಿಸಲು ರೂಪಿಸಿದ ಮಾರ್ಗಸೂಚಿಗಳನ್ನು ಅನುಬಂಧ-01ರಲ್ಲಿ ಮತ್ತು ಕಾಮಗಾರಿಗಳ ಪರಾಮರ್ಶಿಸಲು ಸಮಿತಿ ರಚಿಸಿದ ಆದೇಶವನ್ನು ಅನುಬಂಧ-02 ರಲ್ಲಿ ಇರಿಸಲಾಗಿದೆ.
ಇ)	ಯೋಜನೆಯನ್ನು ಯಾವ ಪ್ರದೇಶಗಳಿಗೆ ನೀಡಲಾಗುವುದು; (ಜಿಲ್ಲಾವಾರು, ತಾಲ್ಲೂಕುವಾರು ಪೂರ್ಣ ವಿವರ ಒದಗಿಸುವುದು)	ಶಾಲಾ ಮಕ್ಕಳ ಮತ್ತು ಸಾರ್ವಜನಿಕರ ಅನುಕೂಲಕ್ಕಾಗಿ ತಾತ್ಕಾಲಿಕವಾಗಿ ನಿರ್ಮಿಸಿರುವ ಕಾಲು ಸಂಕಗಳ ಬದಲಾಗಿ ಅಗತ್ಯವಿರುವೆಡೆಗಳಲ್ಲಿ "ಶಾಲಾ-ಸಂಪರ್ಕ ಯೋಜನೆ" ಯಡಿ 1ಮೀಟರ್‌ನಿಂದ--3ಮೀಟರ್ ಅಗಲದ ಸಂಪರ್ಕ ಸೇತುವೆಗಳನ್ನು ನಿರ್ಮಿಸುವ ಯೋಜನೆಯಾಗಿದೆ.
ಈ)	ಯೋಜನೆಯನ್ನು ಯಾವಾಗ ಕಾರ್ಯರೂಪಕ್ಕೆ ತರಲಾಗುವುದು.	
ಉ)	ಕಾಲು ಸಂಕಗಳನ್ನು ನಿರ್ಮಿಸಲು ಕೈಗೊಂಡ ಕ್ರಮವೇನು? (ವಿವರ ಒದಗಿಸುವುದು)	

ಸಂಖ್ಯೆ:ಲೋಇ 173 ಸಿಬಿಆರ್ 2018

(ಹೆಚ್.ಡಿ. ರೇವಣ್ಣ)
ಮಾನ್ಯ ಲೋಕೋಪಯೋಗಿ ಸಚಿವರು

ಅನುಬಂಧ-1

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯಃ ರಾಜ್ಯದಲ್ಲಿ ಶಾಲಾ ಸಂಪರ್ಕ ಸೇತುವೆ ಯೋಜನೆಯಡಿ ತೂಗು ಸೇತುವೆ ಬದಲಾಗಿ ಶಾಶ್ವತ ಸಂಪರ್ಕ ಸೇತುವೆ ನಿರ್ಮಾಣ ಮಾಡುವ ಸಂಬಂಧ ಮಾರ್ಗಸೂಚಿಗಳು.

****

ಪ್ರಸ್ತಾವನೆ:

ಇತ್ತೀಚೆಗೆ ಮಾನ್ಯ ಮುಖ್ಯ ಮಂತ್ರಿಯವರು ಕೊಡಗು ಮತ್ತು ಶಿವಮೊಗ್ಗ ಜಿಲ್ಲಾ ಪ್ರವಾಸ ಕೈಗೊಂಡ ಸಂದರ್ಭದಲ್ಲಿ, ಹಲವಾರು ಶಾಲಾ ವಿದ್ಯಾರ್ಥಿಗಳು, ಶಾಲಾ ಮುಖ್ಯಸ್ಥರು, ಪೋಷಕರು ಮತ್ತು ಚುನಾಯಿತ ಪ್ರತಿನಿಧಿಗಳು ಮತ್ತು ಜಿಲ್ಲಾಡಳಿತವು ಹಾಲಿ ನಿರ್ಮಿಸಿರುವ ತಾತ್ಕಾಲಿಕ ತೂಗು ಸೇತುವೆಗಳ ಜಾಗದಲ್ಲಿ ಶಾಶ್ವತವಾದ ಸೇತುವೆಗಳನ್ನು ನಿರ್ಮಿಸಿ, ಶಾಲಾ ಮಕ್ಕಳ ವಿದ್ಯಾಭ್ಯಾಸ ಮತ್ತು ಗ್ರಾಮಾಂತರ ಪ್ರದೇಶದ ರೈತರ ದೈನಂದಿನ ಚಟುವಟಿಕೆಗಳಿಗೆ ಅನುವು ಮಾಡಿಕೊಡಬೇಕೆಂದು ಮನವಿ ಮಾಡಿರುವ ಹಿನ್ನೆಲೆಯಲ್ಲಿ, ಮಾನ್ಯ ಲೋಕೋಪಯೋಗಿ ಸಚಿವರು ಇಲಾಖೆಯ ಯೋಜನೆಗಳ ಬಗ್ಗೆ ಪರಾಮರ್ಶಿಸುವ ಸಂದರ್ಭದಲ್ಲಿ ಈ ಅಂಶಗಳನ್ನು ಪ್ರಸ್ತಾಪ ಮಾಡಿ ಚರ್ಚಿಸಿ, ರಾಜ್ಯದಲ್ಲಿನ ಗ್ರಾಮಾಂತರ ಭಾಗದಲ್ಲಿರುವ ಶಾಲಾ ಮಕ್ಕಳ ಅನುಕೂಲಕ್ಕಾಗಿ ತೂಗು ಸೇತುವೆಗಳ ಬದಲಾಗಿ ಶಾಶ್ವತ ಸಂಪರ್ಕ ಸೇತುವೆಗಳನ್ನು ನಿರ್ಮಿಸುವ ಬಗ್ಗೆ ಕ್ರಮವಹಿಸಲು ಸೂಚಿಸಿರುತ್ತಾರೆ.

ರಾಜ್ಯದ ಹಲವಾರು ಜಿಲ್ಲೆಗಳ ಗ್ರಾಮಾಂತರ ಪ್ರದೇಶಗಳಲ್ಲಿ ಅದರಲ್ಲೂ ವಿಶೇಷವಾಗಿ ಪಶ್ಚಿಮ ಘಟ್ಟದ ಮಲೆನಾಡು ಮತ್ತು ಕರಾವಳಿ ಜಿಲ್ಲೆಗಳಲ್ಲಿ ಶಾಲಾ ಮಕ್ಕಳು ಶಾಲೆಗೆ ಹೋಗಲು ತೋಡು/ಹಳ್ಳ-ಕೊಳ್ಳಗಳನ್ನು ದಾಟಿಕೊಂಡು ಹೋಗಬೇಕಾಗಿರುತ್ತದೆ. ಮಳೆಗಾಲದಲ್ಲಿ ಈ ತೂಗು ಸೇತುವೆಗಳ ಮೇಲೆ ನೀರು ಹರಿಯುವುದರಿಂದ ಮತ್ತು ನೀರಿನ ಪ್ರವಾಹದಿಂದ ಈ ಸೇತುವೆಗಳು ಶಿಥಿಲಗೊಂಡು ಹಾಗೂ ಕೆಲವು ಸಂದರ್ಭಗಳಲ್ಲಿ ಕೊಚ್ಚಿಕೊಂಡು ಹೋಗುವ ಸನ್ನಿವೇಶಗಳು ಉದ್ಭವಿಸುವುದರಿಂದ, ಈ ತೂಗು ಸೇತುವೆಗಳ ಮೇಲೆ ಸಂಚಾರವು ತುಂಬಾ ಕಷ್ಟಕರ ಮತ್ತು ಅಪಾಯಕಾರಿಯಾಗಿರುತ್ತದೆ. ಈ ಹಿನ್ನೆಲೆಯಲ್ಲಿ, ತೂಗು ಸೇತುವೆಗಳ ಬದಲಾಗಿ ಶಾಶ್ವತವಾಗಿ ಸಂಪರ್ಕ ಸೇತುವೆಗಳನ್ನು **'ಶಾಲಾ ಸಂಪರ್ಕ ಸೇತು'** ಶೀರ್ಷಿಕೆಯಡಿಯಲ್ಲಿ ನಿರ್ಮಿಸಲು ಉದ್ದೇಶಿಸಲಾಗಿದೆ.

ಆದ್ದರಿಂದ, ಈ ಬಗ್ಗೆ ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ.ಲೋಇ 118 ಸಿಬಿಆರ್ 2018, ಬೆಂಗಳೂರು, ದಿನಾಂಕ 09.11.2018.

ಮೇಲೆ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ರಾಜ್ಯದಲ್ಲಿ ಹಾಲಿ ಇರುವ ತೂಗು ಸೇತುವೆಗಳ ಬದಲಾಗಿ ಶಾಶ್ವತ ಸಂಪರ್ಕ ಸೇತುವೆಗಳನ್ನು **'ಶಾಲಾ ಸಂಪರ್ಕ ಸೇತು'** ಯೋಜನೆಯಡಿ ನಿರ್ಮಾಣ ಮಾಡಿ, ಯೋಜನೆಯನ್ನು ಅನುಷ್ಠಾನಗೊಳಿಸಲು ಈ ಕೆಳಕಂಡ ಮಾರ್ಗಸೂಚಿಗಳನ್ನು ರೂಪಿಸಿದೆ.

1. ಪ್ರಸ್ತಾಪಿತ ಸೇತುವೆಗಳು ಕೇವಲ ಪಾದಚಾರಿಗಳು ಹಾಗೂ ತ್ರಿಚಕ್ರ ವಾಹನಗಳ ಸಂಚಾರಕ್ಕೆ ಅನುವಾಗುವಂತೆ ವಿನ್ಯಾಸವನ್ನು ಸಿದ್ಧಪಡಿಸಬೇಕಿದ್ದು, ಸೇತುವೆಯ ಅಗಲ ಕನಿಷ್ಠ 1.0 ಮೀಟರ್ ನಿಂದ ಗರಿಷ್ಠ 3.00 ಮೀಟರ್ ಅಗಲವಿರಬೇಕು.

2. ಸೇತುವೆಯ ಇಕ್ಕೆಲೆಗಳಲ್ಲಿ ಸೂಕ್ತ ಎತ್ತರ ನಿರ್ಬಂಧಕಗಳನ್ನು ಭಾರಿ ವಾಹನಗಳ ಸಂಚಾರವನ್ನು ನಿಯಂತ್ರಿಸಲು ಅಳವಡಿಸುವುದು (Suitable height barriers restricting the movement of heavy vehicles)

3. ಸೇತುವೆಗಳ ವಿನ್ಯಾಸವನ್ನು ಸ್ಥಳೀಯ ಭೌಗೋಳಿಕ ಸ್ಥಿತಿಗತಿ ಆಧರಿಸಿ ವಿನ್ಯಾಸ ಮಾಡಬೇಕು.

4. ಸೇತುವೆ ನಿರ್ಮಾಣ ಮಾಡುವ ಸ್ಥಳದಲ್ಲಿ ಆಳವಾದ ಕಂದಕವಿದ್ದಲ್ಲಿ ಅಂತಹ ಸ್ಥಳಗಳಲ್ಲಿ Cable stayed bridge/Hanging bridge ಅಥವಾ ಇನ್ನಿತರೆ ಸೇತುವೆಗಳ ನಿರ್ಮಾಣ ಕೈಗೊಳ್ಳುವುದು.

5. ಪ್ರಸ್ತಾಪಿತ ಕ್ರಿಯಾ ಯೋಜನೆಯ ಕಾಮಗಾರಿಗಳನ್ನು ಎರಡು ಅಥವಾ ಮೂರು ರೀತಿಯಾಗಿ ವಿಂಗಡಿಸಿ, type design ತಯಾರಿಸುವುದು.

6. ಈ ಸೇತುವೆಗಳ ನಿರ್ಮಾಣದಿಂದ ಯಾವುದೇ ರೀತಿಯ ಪರಿಸರ ಹಾನಿಯಾಗದಂತೆ ಕ್ರಮವಹಿಸುವುದು.(No negative environmental impact)

7. ಈ ಸೇತುವೆಗಳ ನಿರ್ಮಾಣ ಸ್ಥಳವನ್ನು ನಿರ್ಧರಿಸುವ ಮೊದಲು ಸ್ಥಳೀಯರನ್ನು ಶಾಲಾ ಪ್ರಾಧಿಕಾರವನ್ನು [ಬಿಇಓ / ಡಿಡಿಪಿಐ ಮುಂತಾದವರು] ಅಗತ್ಯವಿದ್ದಲ್ಲಿ ಅರಣ್ಯ ಹಾಗೂ ಕಂದಾಯ ಇಲಾಖೆಯ ಅಧಿಕಾರಿಗಳನ್ನು ಸಂಪರ್ಕಿಸಿ ನಿರ್ಮಾಣದ ಸಾಲು ನೆಲೆಯನ್ನು (alignment) ನಿರ್ಧರಿಸುವುದು.

8. ಲೋಕೋಪಯೋಗಿ ಇಲಾಖೆಯ ಸೇತುವೆಗಳ ವಿನ್ಯಾಸ ಮತ್ತು ನಕ್ಷೆಗಳನ್ನು ಸಿದ್ಧಪಡಿಸಲು ಅವಶ್ಯವಿದ್ದಲ್ಲಿ ಸಮಾಲೋಚಕರನ್ನು [structural consultants] ವೃತ್ತಾವಾರು ನೇಮಿಸಿಕೊಳ್ಳಬಹುದು [Empanelment list of Consultants]

9. ಮೊದಲ ಹಂತದಲ್ಲಿ ಪ್ರತಿ ಕಾಮಗಾರಿಯ ಗರಿಷ್ಠ ಮೊತ್ತ 15.00 ಲಕ್ಷ ರೂ. ಮೀರಬಾರದು.

10. 2018–19ನೇ ಸಾಲಿನಲ್ಲಿ 50.00 ಕೋಟಿ ರೂ.ಅನುದಾನ ಒದಗಿಸಿದೆ. ಆದರೆ ಲೋಕೋಪಯೋಗಿ ಇಲಾಖೆಯು ರೂ.121.71 ಕೋಟಿ ಮೊತ್ತಕ್ಕೆ ಕ್ರಿಯಾ ಯೋಜನೆ 2018–19ನೇ ಸಾಲಿಗೆ ಕೈಗೊಳ್ಳಲು ತಯಾರಿಸಿ, ಸರ್ಕಾರಕ್ಕೆ ಅಪೆಂಡಿಕ್ಸ್–ಇ ರೀತಿ ಪ್ರಸ್ತಾವನೆಗಳನ್ನು ತಯಾರಿಸಬೇಕು. [Master plan to be prepared based on priority]

11. ಸೇತುವೆಗಳ ನಿರ್ಮಾಣದ ಸ್ಥಳದ ಆಯ್ಕೆ, ವಿನ್ಯಾಸ, ವಿಸ್ತೃತ ಯೋಜನಾ ವರದಿ [DPR] ತಯಾರಿಕೆ ಹಾಗೂ ತಾಂತ್ರಿಕ ಮಂಜೂರಾತಿ ಮುಂತಾದ ಪ್ರಕ್ರಿಯೆಗಳನ್ನು ಒಂದು ತಿಂಗಳ ಕಾಲಾವಧಿಯಲ್ಲಿ ಪೂರ್ಣಗೊಳಿಸುವುದು.

12. ಸಂಪರ್ಕ ಸೇತುವೆಗಳ ವಿನ್ಯಾಸ, ಕಟ್ಟೋಣ [structure] ಗಳನ್ನು ನಿಗಧಿಪಡಿಸಲು ಸರ್ಕಾರದ ಕಾರ್ಯದರ್ಶಿಗಳು, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಸಂಬಂಧಿಸಿದ ಮುಖ್ಯ ಇಂಜಿನಿಯರ್‌ಗಳ ಒಂದು ಸಮಿತಿಯನ್ನು ರಚಿಸಿ ಪ್ರತ್ಯೇಕವಾಗಿ ಆದೇಶ ಹೊರಡಿಸಿದೆ.

ಮೇಲ್ಕಂಡ ಮಾರ್ಗಸೂಚಿಗಳನ್ವಯ ಅಗತ್ಯ ಕ್ರಮ ವಹಿಸಲು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎನ್.ಎಸ್.ಬಸವರಾಜು)
ಸರ್ಕಾರದ ಅಧೀನ ಕಾರ್ಯದರ್ಶಿ,
ಲೋಕೋಪಯೋಗಿ, ಬಂದರುಗಳು ಮತ್ತು
ಒಳನಾಡು ಜಲಸಾರಿಗೆ ಇಲಾಖೆ (ಸಂಪರ್ಕ)

ಇವರಿಗೆಃ

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.
3. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು [ದಕ್ಷಿಣ], ಕೆ.ಆರ್.ವೃತ್ತ, ಬೆಂಗಳೂರು.
4. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು [ಉತ್ತರ], ಧಾರವಾಡ.
5. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು [ಈಶಾನ್ಯ], ಕಲಬುರಗಿ.
6. ಮುಖ್ಯ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಗುಣ ನಿಯಂತ್ರಣ ವಲಯ, ಬೆಂಗಳೂರು
7. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ, 3ನೇ ಮಹಡಿ, ಸಂಪರ್ಕ ಸೌಧ, ಓರಿಯನ್ ಮಾಲ್ ಎದುರು, ರಾಜಾಜಿನಗರ, ಬೆಂಗಳೂರು–560 010.
8. ಯೋಜನಾ ನಿರ್ದೇಶಕರು, ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ, ಯೋಜನಾ ಅನುಷ್ಠಾನ ಘಟಕ, ಕೆ.ಆರ್.ವೃತ್ತ, ಬೆಂಗಳೂರು.
9. ಯೋಜನಾ ನಿರ್ದೇಶಕರು, ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ, ಯೋಜನಾ ಅನುಷ್ಠಾನ ಘಟಕ, ಕೆ.ಆರ್.ವೃತ್ತ, ಬೆಂಗಳೂರು.
10. ಎಲ್ಲಾ ಅಧೀಕ್ಷಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ವೃತ್ತ.
11. ಎಲ್ಲಾ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ವಿಭಾಗ.

} **ಸಂಬಂಧಿಸಿದ ಮುಖ್ಯ ಇಂಜಿನಿಯರ್‌ರವರ ಮುಖಾಂತರ** (10–11)

ಪ್ರತಿಃ

1. ಮಾನ್ಯ ಮುಖ್ಯ ಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿ. ವಿಧಾನ ಸೌಧ.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಲೋಕೋಪಯೊಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ;
3. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಲೋಕೋಪಯೊಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ;
4. ಮಾನ್ಯ ಲೋಕೋಪಯೋಗಿ ಸಚಿವರ ಆಪ್ತ ಕಾರ್ಯದರ್ಶಿ. ವಿಧಾನ ಸೌಧ.
5. ವಿಶೇಷಾಧಿಕಾರಿಗಳು, ಆರ್ಥಿಕ ಇಲಾಖೆ, ಲೋಕೋಪಯೋಗಿ ಆರ್ಥಿಕ ಕೋಶ. ವಿಧಾನಸೌಧ.
6. ಸರ್ಕಾರದ ಉಪ ಕಾರ್ಯದರ್ಶಿ(ಸಂಪರ್ಕ ಮತ್ತು ಕಟ್ಟಡಗಳು), ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ.
7. ಆಂತರಿಕ ಆರ್ಥಿಕ ಸಲಹೆಗಾರರು, ಲೋಕೋಪಯೋಗಿ, ಬಂದರುಗಳು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ವಿಕಾಸ ಸೌಧ, ಬೆಂಗಳೂರು;
8. ಶಾಖಾ ರಕ್ಷಾ ಕಡತ ಃ ಹೆಚ್ಚುವರಿ ಪ್ರತಿಗಳು.

ಅನುಬಂಧ-2

<u>ಕರ್ನಾಟಕ ಸರ್ಕಾರದ ನಡವಳಿಗಳು</u>

ವಿಷಯಃ ರಾಜ್ಯದಲ್ಲಿ ಶಾಲಾ ಸಂಪರ್ಕ ಸೇತುವೆ ಯೋಜನೆಯಡಿ ತೂಗು ಸೇತುವೆ ಬದಲಾಗಿ ಶಾಶ್ವತ ಸಂಪರ್ಕ ಸೇತುವೆ ನಿರ್ಮಾಣ ಮಾಡುವ ಸಂಬಂಧ ಪರಾಮರ್ಶಿಸಲು ಕಾರ್ಯದರ್ಶಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸುವ ಕುರಿತು.

****

<u>ಪ್ರಸ್ತಾವನೆ:</u>

ರಾಜ್ಯದ ಹಲವಾರು ಜಿಲ್ಲೆಗಳ ಗ್ರಾಮಾಂತರ ಪ್ರದೇಶಗಳಲ್ಲಿ ಅದರಲ್ಲೂ ವಿಶೇಷವಾಗಿ ಪಶ್ಚಿಮ ಘಟ್ಟದ ಮಲೆನಾಡು ಮತ್ತು ಕರಾವಳಿ ಜಿಲ್ಲೆಗಳಲ್ಲಿ ಶಾಲಾ ಮಕ್ಕಳು ಶಾಲೆಗೆ ಹೋಗಲು ತೋಡು/ಹಳ್ಳ-ಕೊಳ್ಳಗಳನ್ನು ದಾಟಿಕೊಂಡು ಹೋಗಬೇಕಾಗಿರುತ್ತದೆ. ಮಳೆಗಾಲದಲ್ಲಿ ಈ ತೂಗು ಸೇತುವೆಗಳ ಮೇಲೆ ನೀರು ಹರಿಯುವುದರಿಂದ ಮತ್ತು ನೀರಿನ ಪ್ರವಾಹದಿಂದ ಈ ಸೇತುವೆಗಳು ಶಿಥಿಲಗೊಂಡು ಹಾಗೂ ಕೆಲವು ಸಂದರ್ಭಗಳಲ್ಲಿ ಕೊಚ್ಚಿಕೊಂಡು ಹೋಗುವ ಸನ್ನಿವೇಶಗಳು ಉದ್ಭವಿಸುವುದರಿಂದ, ಈ ತೂಗು ಸೇತುವೆಗಳ ಮೇಲೆ ಸಂಚಾರವು ತುಂಬಾ ಕಷ್ಟಕರ ಮತ್ತು ಅಪಾಯಕಾರಿಯಾಗಿರುತ್ತದೆ. ಈ ಹಿನ್ನೆಲೆಯಲ್ಲಿ, ತೂಗು ಸೇತುವೆಗಳ ಬದಲಾಗಿ ಶಾಶ್ವತವಾಗಿ ಸಂಪರ್ಕ ಸೇತುವೆಗಳನ್ನು **'ಶಾಲಾ ಸಂಪರ್ಕ ಸೇತು'** ಶೀರ್ಷಿಕೆಯಡಿಯಲ್ಲಿ ನಿರ್ಮಿಸಲು ರಾಜ್ಯ ಸರ್ಕಾರವು ಉದ್ದೇಶಿಸಿದೆ.

ಈ ಹಿನ್ನೆಲೆಯಲ್ಲಿ, ಲೋಕೋಪಯೋಗಿ ಇಲಾಖೆಯಿಂದ ಕೈಗೊಳ್ಳುತ್ತಿರುವ 'ಶಾಲಾ ಸಂಪರ್ಕ ಸೇತು' ಯೋಜನೆಯು ಹೊಸ ಯೋಜನೆಯಾಗಿರುವುದರಿಂದ, ಸಂಪರ್ಕ ಸೇತುವೆಗಳ ವಿನ್ಯಾಸ, ಕಟ್ಟೋಣ [structure] ಗಳನ್ನು ನಿಗಧಿಪಡಿಸುವುದು ಮತ್ತು ಆದ್ಯತೆಯನುಸಾರ ಕೈಗೊಳ್ಳಬೇಕಾದ ಕಾಮಗಾರಿಗಳ ಆದ್ಯತಾ ಪಟ್ಟಿಯನ್ನು ಅಂತಿಮಗೊಳಿಸಲು ಹಾಗೂ ಪ್ರಗತಿ ಪರಿಶೀಲನೆ ಪರಾಮರ್ಶಿಸಲು ಸರ್ಕಾರದ ಕಾರ್ಯದರ್ಶಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲು ತೀರ್ಮಾನಿಸಿದೆ. ಅದರಂತೆ ಈ ಕೆಳಕಂಡ ಆದೇಶ.

<u>ಸರ್ಕಾರದ ಆದೇಶ ಸಂಖ್ಯೆ.ಲೋಇ 118 ಸಿಬಿಆರ್ 2018 (1) ಬೆಂಗಳೂರು</u>, ದಿನಾಂಕ <u>09.11.2018.</u>

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ರಾಜ್ಯದಲ್ಲಿ ಹಾಲಿ ಇರುವ ತೂಗು ಸೇತುವೆಗಳ ಬದಲಾಗಿ ಶಾಶ್ವತ ಸಂಪರ್ಕ ಸೇತುವೆಗಳನ್ನು ಲೋಕೋಪಯೋಗಿ ಇಲಾಖೆಯ ವತಿಯಿಂದ **'ಶಾಲಾ ಸಂಪರ್ಕ ಸೇತು'** ಯೋಜನೆಯಡಿ ನಿರ್ಮಾಣ ಮಾಡಿ, ಯೋಜನೆಯನ್ನು ಅನುಷ್ಠಾನಗೊಳಿಸುವ ಸಂಬಂಧ ಸಂಪರ್ಕ ಸೇತುವೆಗಳ ವಿನ್ಯಾಸ, ಕಟ್ಟೋಣ [structure] ಗಳನ್ನು ನಿಗಧಿಪಡಿಸುವುದು ಮತ್ತು ಆದ್ಯತೆಯನುಸಾರ ಕೈಗೊಳ್ಳಬೇಕಾದ ಕಾಮಗಾರಿಗಳ ಆದ್ಯತಾ ಪಟ್ಟಿಯನ್ನು ಅಂತಿಮಗೊಳಿಸಲು ಹಾಗೂ ಪ್ರಗತಿ ಪರಿಶೀಲನೆ ಇತ್ಯಾದಿಗಳನ್ನು ಪರಾಮರ್ಶಿಸಲು ಈ ಕೆಳಕಂಡಂತೆ ಸಮಿತಿಯನ್ನು ರಚಿಸಿ ಆದೇಶಿಸಿದೆ.

..2..

1.	ಸರ್ಕಾರದ ಕಾರ್ಯದರ್ಶಿಗಳು, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ	ಅಧ್ಯಕ್ಷರು
2.	ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು [ದಕ್ಷಿಣ], ಕೆ.ಆರ್.ವೃತ್ತ, ಬೆಂಗಳೂರು.	ಸದಸ್ಯರು
3.	ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು [ಉತ್ತರ], ಧಾರವಾಡ	ಸದಸ್ಯರು
4.	ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು [ಈಶಾನ್ಯ], ಕಲಬುರಗಿ.	ಸದಸ್ಯರು
5.	ಮುಖ್ಯ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಗುಣ ನಿಯಂತ್ರಣ ವಲಯ, ಬೆಂಗಳೂರು	ಸದಸ್ಯರು
6.	ಅಧೀಕ್ಷಕ ಇಂಜಿನಿಯರ್[ವಿನ್ಯಾಸ], ಸಂಪರ್ಕ ಮತ್ತು ಕಟ್ಟಡಗಳು [ದಕ್ಷಿಣ], ಬೆಂಗಳೂರು	ಸದಸ್ಯರು
7.	ಅಧೀಕ್ಷಕ ಇಂಜಿನಿಯರ್[ವಿನ್ಯಾಸ], ಸಂಪರ್ಕ ಮತ್ತು ಕಟ್ಟಡಗಳು [ಉತ್ತರ], ಧಾರವಾಡ.	ಸದಸ್ಯರು
8.	ಅಧೀಕ್ಷಕ ಇಂಜಿನಿಯರ್[ವಿನ್ಯಾಸ], ಸಂಪರ್ಕ ಮತ್ತು ಕಟ್ಟಡಗಳು [ಈಶಾನ್ಯ], ಕಲಬುರಗಿ	ಸದಸ್ಯರು
9.	ಅಧೀಕ್ಷಕ ಇಂಜಿನಿಯರ್[ವಿನ್ಯಾಸ], ಲೋಕೋಪಯೋಗಿ ಇಲಾಖೆ, ಗುಣ ನಿಯಂತ್ರಣ ವಲಯ, ಬೆಂಗಳೂರು.	ಸದಸ್ಯರು
10.	ಸರ್ಕಾರದ ಉಪ ಕಾರ್ಯದರ್ಶಿ(ಸಂಪರ್ಕ ಮತ್ತು ಕಟ್ಟಡಗಳು), ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ.	ಸದಸ್ಯ ಕಾರ್ಯದರ್ಶಿ

ಈ ಸಮಿತಿಯು ಕನಿಷ್ಠ ತಿಂಗಳಲ್ಲಿ ಒಂದು ಬಾರಿ ಸಭೆ ಸೇರಿ ಪರಾಮರ್ಶೆ/ಪ್ರಗತಿ ಪರಿಶೀಲನೆ ನಡೆಸುವುದು ಹಾಗೂ ಮಾಸಿಕ ಪ್ರಗತಿ ಪರಿಶೀಲನಾ ಸಭೆಯಲ್ಲಿಯೂ ಸಹ ಪರಿಶೀಲನೆ ನಡೆಸುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎನ್.ಎನ್.ಬಸವರಾಜು)
ಸರ್ಕಾರದ ಅಧೀನ ಕಾರ್ಯದರ್ಶಿ,
ಲೋಕೋಪಯೋಗಿ, ಬಂದರುಗಳು ಮತ್ತು
ಒಳನಾಡು ಜಲಸಾರಿಗೆ ಇಲಾಖೆ (ಸಂಪರ್ಕ)

ಇವರಿಗೆ:

1. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು [ದಕ್ಷಿಣ], ಕೆ.ಆರ್.ವೃತ್ತ, ಬೆಂಗಳೂರು.
2. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು [ಉತ್ತರ], ಧಾರವಾಡ
3. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು [ಈಶಾನ್ಯ], ಕಲಬುರಗಿ.
4. ಮುಖ್ಯ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಗುಣ ನಿಯಂತ್ರಣ ವಲಯ, ಬೆಂಗಳೂರು
5. ಅಧೀಕ್ಷಕ ಇಂಜಿನಿಯರ್[ವಿನ್ಯಾಸ], ಸಂಪರ್ಕ ಮತ್ತು ಕಟ್ಟಡಗಳು [ದಕ್ಷಿಣ], ಬೆಂಗಳೂರು
6. ಅಧೀಕ್ಷಕ ಇಂಜಿನಿಯರ್[ವಿನ್ಯಾಸ], ಸಂಪರ್ಕ ಮತ್ತು ಕಟ್ಟಡಗಳು [ಉತ್ತರ], ಧಾರವಾಡ.
7. ಅಧೀಕ್ಷಕ ಇಂಜಿನಿಯರ್[ವಿನ್ಯಾಸ], ಸಂಪರ್ಕ ಮತ್ತು ಕಟ್ಟಡಗಳು [ಈಶಾನ್ಯ], ಕಲಬುರಗಿ
8. ಅಧೀಕ್ಷಕ ಇಂಜಿನಿಯರ್[ವಿನ್ಯಾಸ], ಲೋಕೋಪಯೋಗಿ ಇಲಾಖೆ, ಗುಣ ನಿಯಂತ್ರಣ ವಲಯ, ಬೆಂಗಳೂರು.
9. ಎಲ್ಲಾ ಅಧೀಕ್ಷಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ವೃತ್ತ.
10. ಎಲ್ಲಾ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ವಿಭಾಗ.

} **ಸಂಬಂಧಿಸಿದ ಮುಖ್ಯ ಇಂಜಿನಿಯರ್‌ರವರ ಮುಖಾಂತರ**

ಪ್ರತಿ ಮಾಹಿತಿಗಾಗಿ:

1. ಮಾನ್ಯ ಮುಖ್ಯ ಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿ. ವಿಧಾನ ಸೌಧ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖೆ : 223

ಸದಸ್ಯರ ಹೆಸರು : ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ)

ಉತ್ತರಿಸುವ ದಿನಾಂಕ : 12.12.2018

ಉತ್ತರಿಸುವ ಸಚಿವರು : ಲೋಕೋಪಯೋಗಿ ಸಚಿವರು

ಕ್ರಮ ಸಂಖ್ಯೆ	ಪ್ರಶ್ನೆಗಳು	ಉತ್ತರಗಳು
ಅ)	ರಾಜ್ಯದಲ್ಲಿ ಇತ್ತೀಚೆಗೆ ಲೋಕೋಪಯೋಗಿ ರಸ್ತೆಗಳನ್ನು ಮೇಲ್ದರ್ಜೆಗೇರಿಸಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವಹಿಸಿಕೊಂಡಿರುವ ಹಾಗೂ ಬೇರೆ ಲೆಕ್ಕಶೀರ್ಷಿಕೆಗಳಿಗೆ ವರ್ಗಾಯಿಸಿರುವ ರಸ್ತೆಗಳ ಉದ್ದವೆಷ್ಟು?	ರಾಜ್ಯದಲ್ಲಿ 586.20 ಉದ್ದದ ರಸ್ತೆಗಳನ್ನು 2017–18 ಹಾಗೂ 2018–19ನೇ ಸಾಲಿನಲ್ಲಿ ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ತಾತ್ವಿಕವಾಗಿ ಮೇಲ್ದರ್ಜೆಗೇರಿಸಲಾಗಿದೆ. ಮುಂದುವರೆದು, ಈ ಕೆಳಗಿನ ರಸ್ತೆಗಳನ್ನು ಲೋಕೋಪಯೋಗಿ ಇಲಾಖೆಯಿಂದ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರಿಗೆ ಹಸ್ತಾಂತರಿಸಲಾಗಿದೆ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವರದಿಸಿರುತ್ತಾರೆ 1. SH-17 ರಿಂದ NH-275 [117 ಕಿ.ಮೀ ರಸ್ತೆ ಅಗಲೀಕರಣಕ್ಕಾಗಿ] 2. ಹಾವೇರಿ–ಎಕ್ಕುಂಬಿ SH-169: ಎಕ್ಕುಂಬಿ–ಕುಮಟಾ / ಬೇಲೆಕೇರಿ (54 ಕಿ.ಮೀ ರಸ್ತೆ ಅಗಲೀಕರಣಕ್ಕಾಗಿ)

..2..

ಆ)	ಲೋಕೋಪಯೋಗಿ ರಸ್ತೆಗಳನ್ನು ಪಿ.ಎಂ.ಜಿ.ಎಸ್.ವೈ ನಂತರ ಶೀರ್ಷಿಕೆಗೆ ವರ್ಗಾಯಿಸಿರುವುದು ಸರಿಯೇ?	ತುಮಕೂರು ಜಿಲ್ಲೆಯ ಶಿರಾ-ಚಿಕ್ಕನಾಯಕನಹಳ್ಳಿ ಹಾಗೂ ತುಮಕೂರು ತಾಲ್ಲೂಕು ವ್ಯಾಪ್ತಿಯ 9 ಜಿಲ್ಲಾ ಮುಖ್ಯ ರಸ್ತೆಗಳು ಸಮರ್ಪಕ ನಿರ್ವಹಣೆ ಇಲ್ಲದೆ ತುಂಬಾ ಹದಗೆಟ್ಟಿದ್ದು, ಸಾರ್ವಜನಿಕರು ಹಾಗೂ ರೈತರು ತುಂಬಾ ತೊಂದರೆಗೊಳಗಾಗಿರುವುದರಿಂದ,ಈ ರಸ್ತೆಗಳನ್ನು ಬೇರೆ ಯೋಜನೆಯಡಿಯಲ್ಲಿ ಅಭಿವೃದ್ಧಿಪಡಿಸಲು ಅನುವಾಗುವಂತೆ ಸದರಿ 9 ಜಿಲ್ಲಾ ಮುಖ್ಯ ರಸ್ತೆಗಳನ್ನು ಕೆಳದರ್ಜೆಗಿಳಿಸುವಂತೆ ಸ್ಥಳೀಯ ಶಾಸಕರು ಮನವಿ ಸಲ್ಲಿಸಿದ್ದ ಹಿನ್ನೆಲೆಯಲ್ಲಿ ಹಾಗೂ ಈ ರಸ್ತೆಗಳ ಅಭಿವೃದ್ಧಿಗೆ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಪ್ರಧಾನ ಮಂತ್ರಿ ಗ್ರಾಮೀಣ ರಸ್ತೆ ಯೋಜನೆಯಡಿ ಅನುದಾನ ದೊರೆಯುತ್ತಿರುವುದರಿಂದ, ಸದರಿ ಜಿಲ್ಲಾ ಮುಖ್ಯ ರಸ್ತೆಗಳನ್ನು ಮೇಲ್ದರ್ಜೆಗೇರಿಸಿರುವುದನ್ನು ರದ್ದುಪಡಿಸಿ, ಪುನ: ಗ್ರಾಮೀಣ ರಸ್ತೆಗಳನ್ನಾಗಿ ಪರಿವರ್ತಿಸಲು ಮುಖ್ಯ ಅಭಿಯಂತರರು, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ), ಬೆಂಗಳೂರು ಇವರು ಕೋರಿದ್ದ ಹಿನ್ನೆಲೆಯಲ್ಲಿ, ಸರ್ಕಾರದ ಆದೇಶ ಸಂಖ್ಯೆ:ಲೋಇ/374/ ಸಿಆರ್‌ಎಂ/2007 ದಿನಾಂಕ 21.08.2009ರಲ್ಲಿ ತುಮಕೂರು ಜಿಲ್ಲೆಗೆ ಸಂಬಂಧಿಸಿದಂತೆ ಒಟ್ಟಾರೆ 101.50 ಕಿಮೀ ಉದ್ದದ 9 ಜಿಲ್ಲಾ ಮುಖ್ಯ ರಸ್ತೆಗಳನ್ನು ಗ್ರಾಮೀಣ ರಸ್ತೆಗಳನ್ನಾಗಿ ಡಿನೋಟಿಫೈ ಮಾಡಿ ಸದರಿ ರಸ್ತೆಗಳನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ವಶಕ್ಕೆ ನೀಡಲಾಗಿದೆ.
ಇ)	ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಕಡಿಮೆಯಾಗಿರುವ ಉದ್ದದ ಲೋಕೋಪಯೋಗಿ ರಸ್ತೆಗಳಿಗೆ ಹಾಲಿ ಇರುವ ಜಿಲ್ಲಾ ಪಂಚಾಯತಿ ಅಥವಾ ಗ್ರಾಮೀಣ ರಸ್ತೆಗಳನ್ನು ಮೇಲ್ದರ್ಜೆಗೇರಿಸಲಾಗುವುದೇ, ಹಾಗಿದ್ದಲ್ಲಿ ಎಂದಿನಿಂದ ಈ ಪ್ರಕ್ರಿಯೆ ಆರಂಭಿಸಲಾಗುವುದು?	ಪ್ರಸ್ತುತ ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಜಿಲ್ಲಾ ಪಂಚಾಯ್ತಿ ವ್ಯಾಪ್ತಿಯ ಹಾಗೂ ಗ್ರಾಮೀಣ ರಸ್ತೆಗಳನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಇರುವುದಿಲ್ಲ.

ಸಂಖ್ಯೆ: ಲೋಇ 394 ಸಿಎನ್‌ಹೆಚ್ 2018.

(ಹೆಚ್. ಡಿ. ರೇವಣ್ಣ)
ಲೋಕೋಪಯೋಗಿ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 877
ಸದಸ್ಯರ ಹೆಸರು	: ಶ್ರೀ ಎಚ್. ಹಾಲಪ್ಪ (ಸಾಗರ)
ಉತ್ತರಿಸಬೇಕಾದ ದಿನಾಂಕ	: 12-12-2018
ಉತ್ತರಿಸುವ ಸಚಿವರು	: ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು.

ಪ್ರ. ಸಂ.	ಪ್ರಶ್ನೆ	ಉತ್ತರ
ಅ)	ಹೊಸನಗರ ಪಟ್ಟಣ ಪಂಚಾಯಿತಿಯ ಕಟ್ಟಡ ದುರಸ್ತಿಯಲ್ಲಿದ್ದು, ಹೊಸ ಕಟ್ಟಡವನ್ನು ನಿರ್ಮಿಸಲು ಅನುದಾನ ಕೋರಿ ಪ್ರಸ್ತಾವನೆ ಸಲ್ಲಿಸಿದ್ದು ಪ್ರಸ್ತುತ ಯಾವ ಹಂತದಲ್ಲಿದೆ;	ಹೊಸನಗರ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಮೂಲಭೂತ ಸೌಕರ್ಯವನ್ನು ಕಲ್ಪಿಸಲು ರಾಜ್ಯ ಸರ್ಕಾರವು ಈ ಕೆಳಕಂಡ ಅನುದಾನವನ್ನು ಮಂಜೂರು ಮಾಡಲಾಗಿರುತ್ತದೆ.
ಆ)	ಅನುದಾನವನ್ನು ಬಿಡುಗಡೆ ಮಾಡಲು ಇರುವ ತೊಂದರೆಗಳೇನು;	
ಇ)	ಕಟ್ಟಡ ಕಾಮಗಾರಿಗೆ ಅನುದಾನ ಬಿಡುಗಡೆ ಮಾಡಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ತೆಗೆದುಕೊಂಡ ಕ್ರಮವೇನು? (ವಿವರ ಒದಗಿಸುವುದು)	ಮೇಲ್ಕಂಡ ಅನುದಾನಗಳಡಿ ಪಟ್ಟಣ ಪಂಚಾಯ್ತಿಯ ವ್ಯಾಪ್ತಿಯಲ್ಲಿ ಅಗತ್ಯವಿರುವ ಕಟ್ಟಡ ಕಾಮಗಾರಿಗಳನ್ನು ಕೈಗೊಳ್ಳಲು ಮಾರ್ಗಸೂಚಿಗಳಲ್ಲಿ ಅವಕಾಶ ಕಲ್ಪಿಸಲಾಗಿದೆ. ಮುಂದುವರೆದು, ಹೊಸನಗರ ಪಟ್ಟಣ ಪಂಚಾಯ್ತಿಯ ಕಛೇರಿ ಕಟ್ಟಡ ನಿರ್ಮಿಸಲು ರೂ.100.00 ಲಕ್ಷಗಳ ಅನುದಾನ ಮಂಜೂರು ಮಾಡಲು ಕೋರಿ, ಪ್ರಸ್ತಾವನೆ ಸ್ವೀಕೃತವಾಗಿರುತ್ತದೆ. ಆದರೆ, ಎಸ್‌ಎಫ್‌ಸಿ ಅನುದಾನವು ತೀವ್ರ ಕೊರತೆಯಲ್ಲಿರುವುದರಿಂದ ಪ್ರಸ್ತಾವನೆಯನ್ನು ಪರಿಗಣಿಸಲು ಸಾಧ್ಯವಾಗಿರುವುದಿಲ್ಲ.

(ರೂ.ಲಕ್ಷಗಳಲ್ಲಿ)

ಕ್ರ. ಸಂ	ಯೋಜನೆ	ಹಂಚಿಕೆ	ಬಿಡುಗಡೆ
1.	ಎಸ್‌ಎಫ್‌ಸಿ ಮುಕ್ತನಿಧಿ (2018-19)	42.00	10.50
2.	14ನೇ ಹಣಕಾಸು ಆಯೋಗ (2018-19)	46.79	23.39
3.	ನಗರೋತ್ಥಾನ (ಮುನಿಸಿಪಾಲಿಟಿಸ್) ಹಂತ-3	200.00	48.13
	ಒಟ್ಟು	288.79	82.02

ಸಂಖ್ಯೆ: ನಅಇ 256 ಎಸ್‌ಎಫ್‌ಸಿ 2018.

(ರಮೇಶ ಲ. ಜಾರಕಿಹೊಳಿ)
ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ
ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 93
ಸದಸ್ಯರ ಹೆಸರು	: ಡಾ॥ ಅಂಜಲಿ ಹೇಮಂತ್ ನಿಂಬಾಳ್ಕರ್ (ಖಾನಾಪುರ)
ಉತ್ತರಿಸಬೇಕಾದ ದಿನಾಂಕ	: 12-12-2018
ಉತ್ತರಿಸುವ ಸಚಿವರು	: ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು.

ಪ್ರ. ಸಂ.	ಪ್ರಶ್ನೆ	ಉತ್ತರ
ಅ)	ಬೆಳಗಾವಿ ಜಿಲ್ಲೆ, ಖಾನಾಪುರ ಪಟ್ಟಣದಲ್ಲಿ ಹನ್ನೆರಡು ವರ್ಷಗಳಿಗೊಮ್ಮೆ ನಡೆಯುವ ಶ್ರೀ ಲಕ್ಷ್ಮೀದೇವಿ ಜಾತ್ರೆಯು 2019ರ ಜನವರಿಯಲ್ಲಿ ನಡೆಯಲಿರುವ ಪ್ರತಿದಿನ ಲಕ್ಷಾಂತರ ಭಕ್ತಾದಿಗಳು ಆಗಮಿಸುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಖಾನಾಪುರ ಪಟ್ಟಣ ಪಂಚಾಯ್ತಿ ವ್ಯಾಪ್ತಿಯಲ್ಲಿ 2019ರ ಜನವರಿಯಲ್ಲಿ ನಡೆಯಲಿರುವ ಶ್ರೀ ಲಕ್ಷ್ಮೀದೇವಿ ಜಾತ್ರೆಯ ಪ್ರಯುಕ್ತ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ರೂ.5.00ಕೋಟಿ ಎಸ್.ಎಫ್.ಸಿ ವಿಶೇಷ ಅನುದಾನ ಮಂಜೂರು ಮಾಡಲು ಕೋರಿ, ಪ್ರಸ್ತಾವನೆ ಸ್ವೀಕೃತವಾಗಿರುತ್ತದೆ. ಆದರೆ, ಎಸ್ಎಫ್‌ಸಿ ವಿಶೇಷ ಅನುದಾನವು ಕೊರತೆಯಲ್ಲಿರುವುದರಿಂದ ಪ್ರಸ್ತಾವನೆಯನ್ನು ಪರಿಗಣಿಸಲು ಕಷ್ಟಸಾಧ್ಯವಾಗಿರುತ್ತದೆ.
ಆ)	ಹಾಗಿದ್ದಲ್ಲಿ, ಈ ಜಾತ್ರೆಗೆ ಆಗಮಿಸುವ ಭಕ್ತಾದಿಗಳ ಹಾಗೂ ಸ್ಥಳೀಯ ನಾಗರೀಕರ ಅನುಕೂಲಕ್ಕಾಗಿ ಖಾನಾಪುರ ಪಟ್ಟಣದಲ್ಲಿ ರಸ್ತೆ, ಚರಂಡಿ, ಕುಡಿಯುವ ನೀರು, ಬೀದಿದೀಪ ಮುಂತಾದ ಮೂಲಭೂತ ಸೌಕರ್ಯಗಳನ್ನೊದಗಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು;	ಖಾನಾಪುರ ಪಟ್ಟಣ ಪಂಚಾಯ್ತಿ ವ್ಯಾಪ್ತಿಯಲ್ಲಿ ಮೂಲಭೂತ ಸೌಕರ್ಯವನ್ನು ಕಲ್ಪಿಸಲು ರಾಜ್ಯ ಸರ್ಕಾರವು ಈ ಕೆಳಕಂಡ ಅನುದಾನವನ್ನು ಮಂಜೂರು ಮಾಡಲಾಗಿರುತ್ತದೆ. (ರೂ.ಲಕ್ಷಗಳಲ್ಲಿ) (see table below)
ಇ)	ಈ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಸರ್ಕಾರ ನಿಗದಿಪಡಿಸಿದ ಮತ್ತು ಬಿಡುಗಡೆ ಮಾಡಿದ ಅನುದಾನವೆಷ್ಟು (ಸಂಪೂರ್ಣ ಮಾಹಿತಿಯನ್ನು ಒದಗಿಸುವುದು)?	ಮೇಲ್ಕಂಡ ಅನುದಾನಗಳಡಿ ಪಟ್ಟಣ ಪಂಚಾಯ್ತಿಯ ವ್ಯಾಪ್ತಿಯಲ್ಲಿ ಅಗತ್ಯವಿರುವ ಮೂಲಭೂತ ಸೌಕರ್ಯ ಕಾಮಗಾರಿಗಳನ್ನು ಕೈಗೊಳ್ಳಲು ಮಾರ್ಗಸೂಚಿಗಳಲ್ಲಿ ಅವಕಾಶ ಕಲ್ಪಿಸಲಾಗಿದೆ. ಸರ್ಕಾರದಿಂದ ನೀಡುತ್ತಿರುವ ಅನುದಾನಗಳಲ್ಲದೇ ಸ್ಥಳೀಯ ಸಂಸ್ಥೆಯು ತನ್ನ ಸ್ವಂತ ನಿಧಿಯಿಂದ ಸಂಪನ್ಮೂಲಗಳನ್ನು ಕ್ರೋಢೀಕರಿಸಿ, ಅಗತ್ಯವಿರುವ ಮೂಲಭೂತ ಸೌಕರ್ಯವನ್ನು ಒದಗಿಸಲು ಅವಕಾಶವಿರುತ್ತದೆ.

(ರೂ.ಲಕ್ಷಗಳಲ್ಲಿ)

ಕ್ರ. ಸಂ	ಯೋಜನೆ	ಹಂಚಿಕೆ	ಬಿಡುಗಡೆ
1.	ಎಸ್ಎಫ್‌ಸಿ ಮುಕ್ತನಿಧಿ (2018-19)	65.00	32.50
2.	14ನೇ ಹಣಕಾಸು ಆಯೋಗ (2018-19)	71.80	35.90
3.	ನಗರೋತ್ಥಾನ (ಮುನಿಸಿಪಾಲಿಟಿಸ್) ಹಂತ-3	200.00	116.32
	ಒಟ್ಟು	336.80	184.72

ಸಂಖ್ಯೆ: ನಅಇ 241 ಎಸ್ಎಫ್‌ಸಿ 2018.

(ರಮೇಶ ಲ. ಜಾರಕಿಹೊಳಿ)
ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ
ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 1350
ಸದಸ್ಯರ ಹೆಸರು	: ಶ್ರೀ ಡಿ.ಎಸ್ ಹಲಗೇರಿ (ಲಿಂಗಸುಗೂರು)
ಉತ್ತರಿಸಬೇಕಾದ ದಿನಾಂಕ	: 12-12-2018
ಉತ್ತರಿಸುವ ಸಚಿವರು	: ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ	ಲಿಂಗಸಗೂರು ವಿಧಾನಸಭಾ ಕ್ಷೇತ್ರದಲ್ಲಿ ಬರುವ ಲಿಂಗಸಗೂರು, ಮುದಗಲ್ಲ ಹಾಗೂ ನೂತನವಾಗಿ ಘೋಷಣೆಯಾಗಿರುವ ಹಟ್ಟಿ ಪಟ್ಟಣ ಪಂಚಾಯ್ತಿಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು?	ಲಿಂಗಸಗೂರು ವಿಧಾನಸಭಾ ಕ್ಷೇತ್ರದಲ್ಲಿ ಬರುವ ಲಿಂಗಸಗೂರು, ಮುದಗಲ್ಲ ಹಾಗೂ ನೂತನವಾಗಿ ಘೋಷಣೆಯಾಗಿರುವ ಹಟ್ಟಿ ಪಟ್ಟಣ ಪಂಚಾಯ್ತಿಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಈ ಕೆಳಕಂಡ ವಿವಿಧ ಯೋಜನೆಗಳನ್ನು ಕೈಗೆತ್ತಿಕೊಂಡಿರುತ್ತದೆ.

1. **<u>14ನೇ ಹಣಕಾಸು ಆಯೋಗದ ಅನುದಾನ:-</u>**

ಲಿಂಗಸಗೂರು ವಿಧಾನಸಭಾ ಕ್ಷೇತ್ರದಲ್ಲಿ ಬರುವ ಲಿಂಗಸಗೂರು ಪುರಸಭೆ, ಮುದಗಲ್ ಪುರಸಭೆಗಳಿಗೆ 14ನೇ ಹಣಕಾಸು ಆಯೋಗದ ಅನುದಾನದಡಿ 2015-16ನೇ ಸಾಲಿನಿಂದ ಈ ಕೆಳಕಂಡಂತೆ ಹಂಚಿಕೆ ಮಾಡಿ ಬಿಡುಗಡೆಗೊಳಿಸಲಾಗಿದೆ.

(ರೂ. ಲಕ್ಷಗಳಲ್ಲಿ)

ನಗರ ಸ್ಥಳೀಯ ಸಂಸ್ಥೆಯ ಹೆಸರು	2015-16		2016-17		2017-18		2018-19	
	ಹಂಚಿಕೆ	ಬಿಡುಗಡೆ	ಹಂಚಿಕೆ	ಬಿಡುಗಡೆ	ಹಂಚಿಕೆ	ಬಿಡುಗಡೆ	ಹಂಚಿಕೆ	ಬಿಡುಗಡೆ
ಲಿಂಗಸಗೂರು	105.00	105.00	181.55	181.55	154.64	154.64	175.81	87.89
ಮುದಗಲ್	68.00	68.00	118.50	118.50	101.62	101.62	114.40	57.20

ಹೊಸದಾಗಿ ಘೋಷಣೆಯಾದ ಹಟ್ಟಿ ಪಟ್ಟಣ ಪಂಚಾಯಿತಿಯು ಪ್ರಸ್ತುತ ಸಾಲಿನಲ್ಲಿ ಮೇಲ್ದರ್ಜೆಗೇರಿಸಲಾಗಿದ್ದು, ಘೋಷಣೆಯಾಗುವ ಮುಂಚಿತವಾಗಿಯೇ 14ನೇ ಹಣಕಾಸು ಆಯೋಗದ ಹಂಚಿಕೆ ಪೂರ್ಣಗೊಂಡಿದ್ದರಿಂದ ಪ್ರಸ್ತುತ ಸಾಲಿನಲ್ಲಿ ಹಂಚಿಕೆ ಮಾಡಲು ಸಾಧ್ಯವಾಗಿರುವುದಿಲ್ಲ. 14ನೇ ಹಣಕಾಸು ಆಯೋಗದ ಅನುದಾನವನ್ನು ಮುಂದಿನ ಆರ್ಥಿಕ ಸಾಲಿನಿಂದ ಹಟ್ಟಿ ಪಟ್ಟಣ ಪಂಚಾಯಿತಿಗೆ ಒದಗಿಸಲು ಕ್ರಮವಹಿಸಲಾಗವುದು.

<u>ಎಸ್‌ಎಫ್‌ಸಿ ಅನುದಾನ:-</u>

ಲಿಂಗಸಗೂರು ವಿಧಾನ ಸಭಾ ಕ್ಷೇತ್ರದಲ್ಲಿ ಬರುವ ಲಿಂಗಸಗೂರು, ಮುದಗಲ್ಲ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಎಸ್.ಎಫ್.ಸಿ ಮುಕ್ತನಿಧಿ ಹಾಗೂ ಎಸ್.ಎಫ್.ಸಿ ಕುಡಿಯುವ ನೀರಿನ ಅನುದಾನದಡಿ 2017-18ನೇ ಸಾಲಿನಲ್ಲಿ ಮಂಜೂರು ಮಾಡಿರುವ, ಬಿಡುಗಡೆಗೊಳಿಸಲಾಗಿರುವ ಹಾಗೂ ವೆಚ್ಚ ಮಾಡಲಾಗಿರುವ ಅನುದಾನದ ವಿವರಗಳನ್ನು ಅನುಬಂಧ-01 ರಲ್ಲಿ ಲಗತ್ತಿಸಿ ಸಲ್ಲಿಸಿದೆ.

ನೂತನವಾಗಿ ಘೋಷಣೆಯಾಗಿರುವ ಹಟ್ಟಿ ಪಟ್ಟಣ ಪಂಚಾಯಿತಿಗೆ ಮುಂದಿನ ಆರ್ಥಿಕ ವರ್ಷದಿಂದ ಎಸ್‌ಎಫ್‌ಸಿ ಅನುದಾನವನ್ನು ಹಂಚಿಕೆ ಕ್ರಮವಹಿಸಲಾಗುತ್ತದೆ.

1. **<u>ಸಿಎಂಎಸ್‌ಎಂಟಿಡಿಪಿ / ನಗರೋತ್ಥಾನ ಯೋಜನೆ:-</u>**

ಲಿಂಗಸಗೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ನಗರೋತ್ಥಾನ-2ನೇ ಹಂತದ ಯೋಜನೆಯಡಿ ಲಿಂಗಸಗೂರು ಪುರಸಭೆಗೆ ರೂ.500.00 ಲಕ್ಷಗಳ ಅನುದಾನ ಹಂಚಿಕೆಯಾಗಿದ್ದು, ಈ

ಅನುದಾನದಲ್ಲಿ ರೂ.464.00 ಲಕ್ಷಗಳ ವೆಚ್ಚದಲ್ಲಿ ಒಟ್ಟು 5 ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಅದರಲ್ಲಿ 4 ಕಾಮಗಾರಿಗಳು ಪೂರ್ಣಗೊಂಡಿದ್ದು, 1 ಕಾಮಗಾರಿ ಪ್ರಗತಿಯಲ್ಲಿದೆ ಹಾಗೂ ಮುದಗಲ್ಲ ಪುರಸಭೆಗೆ ರೂ.500.00 ಲಕ್ಷಗಳ ಅನುದಾನ ಹಂಚಿಕೆಯಾಗಿದ್ದು, ಈ ಅನುದಾನದಲ್ಲಿ ರೂ.340.00 ಲಕ್ಷಗಳ ವೆಚ್ಚದಲ್ಲಿ ಒಟ್ಟು 5 ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಅದರಲ್ಲಿ 4 ಕಾಮಗಾರಿಗಳು ಪೂರ್ಣಗೊಂಡಿದ್ದು, 1 ಕಾಮಗಾರಿ ಪ್ರಗತಿಯಲ್ಲಿದೆ.

ನಗರೋತ್ಥಾನ (ಮುನಿಸಿಪಾಲಿಟಿ)-3 ಯೋಜನೆಯಡಿ ಲಿಂಗಸಗೂರು ಪುರಸಭೆಗೆ ಹಂಚಿಕೆಯಾದ ರೂ.750.00 ಲಕ್ಷಗಳ ಅನುದಾನದಲ್ಲಿ 11 ಅಭಿವೃದ್ಧಿ ಕಾಮಗಾರಿಗಳು ಹಾಗೂ ಮುದಗಲ್ಲ ಪುರಸಭೆಗೆ ಹಂಚಿಕೆಯಾದ ರೂ.750.00 ಲಕ್ಷಗಳ ಅನುದಾನದಲ್ಲಿ 14 ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದ್ದು, ಎಲ್ಲಾ ಕಾಮಗಾರಿಗಳು ಪ್ರಗತಿಯಲ್ಲಿವೆ.

ನೂತನವಾಗಿ ಸೃಜಿಸಲಾಗಿರುವ **ಹಟ್ಟಿ ಪಟ್ಟಣ ಪಂಚಾಯಿತಿಗೆ** ನಗರೋತ್ಥಾನ (ಮುನಿಸಿಪಾಲಿಟಿ)-3 ಯೋಜನೆಯಡಿ ರೂ.500.00ಲಕ್ಷಗಳ ಅನುದಾನ ಹಂಚಿಕೆಯಾಗಿದ್ದು, ಕ್ರಿಯಾಯೋಜನೆ ಅನುಮೋದನೆಯಾಗ ಬೇಕಾಗಿರುತ್ತದೆ.

ಸ್ವಚ್ಛ ಭಾರತ್ ಅಭಿಯಾನ;-

ಕೇಂದ್ರ ಪುರಸ್ಕೃತ ಸ್ವಚ್ಛ ಭಾರತ್ ಮಿಷನ್ ಯೋಜನೆ 02 ಅಕ್ಟೋಬರ್ 2014 ರಂದು ಜಾರಿಗೆ ತಂದಿದ್ದು ಸದರಿ ಯೋಜನೆಯು ಅಕ್ಟೋಬರ್ 02, 2019 ರ ವರೆಗೆ ಜಾರಿಯಲ್ಲಿರುತ್ತದೆ.

ಲಿಂಗಸಗೂರು ವಿಧಾನಸಭಾ ಕ್ಷೇತ್ರದ ವಿವಿಧ ನಗರ ಸ್ಥಳೀಯ ಸಂಸ್ಥೆಗಳಗೆ ಸ್ವಚ್ಛ ಭಾರತ್ ಮಿಷನ್ ಯೋಜನೆಯಡಿ ಕಳೆದ 4 ವರ್ಷಗಳಲ್ಲಿ ಲೆಕ್ಕ ಶೀರ್ಷಿಕೆ 2217-80-800-0-35 ಅಡಿಯಲ್ಲಿ ಬಿಡುಗಡೆಯಾದ ಅನುದಾನದ ವಿವರ ಈ ಕೆಳಕಂಡಂತಿರುತ್ತದೆ:

(ರೂ. ಲಕ್ಷಗಳಲ್ಲಿ)

ನ.ಸ್ಥ.ಸಂ ಹೆಸರು	ವೈಯಕ್ತಿಯ ಶೌಚಾಲಯ ನಿರ್ಮಾಣ	
	ಬಿಡುಗಡೆ ಮಾಡಿದ ಅನುದಾನ	ನಿರ್ಮಾಣ ಮಾಡಲಾದ ಶೌಚಾಲಯಗಳು
ಲಿಂಗಸಗೂರು ನಗರಸಭೆ	69.33	958.00
ಮುದಗಲ್ಲ ಪುರಸಭೆ	88.58	1407.00
ಹಟ್ಟಿ ಪಟ್ಟಣ ಪಂಚಾಯತಿ	0.00	0.00

ಸಂಖ್ಯೆ: ನಅಇ 257 ಎಸ್ಎಫ್‌ಸಿ 2018.

(ರಮೇಶ ಲ. ಜಾರಕಿಹೊಳಿ)
ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ
ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

ABSTRACT REPORT ಅನುಬಂಧ-1

PROGRESS OF WORKS UNDER SFC Drinking Water 2017-18

Date=05-12-2018 | Rs. in Lakhs

1	2	3	4	5	6	7	8	9	10	11
Division	District	Name Of the Town	ULB Type	Financial Progress (Rs.in Lakhs)			Physical Progress			
				Grants Allocation	Grants Released	Expenditure	Total Approved Works	Completed Works	Works Started/Ongoing	Under Tender Process/Tender to be Invited
Kalaburagi Division	Raichur	Lingasugur	TMC	166.99	135.3	135.3	26	26	0	0
Kalaburagi Division	Raichur	Mudgal	TP	108.69	67.45	108.62	25	25	0	0
			Total	**275.68**	**202.75**	**243.92**	**51**	**51**	**0**	**0**

5/12/2018

ಕರ್ನಾಟಕ ವಿಧಾನ ಸಭೆ

1. ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : 836
2. ಸದಸ್ಯರ ಹೆಸರು : ಶ್ರೀ ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ್ (ಇಂಡಿ)
3. ಉತ್ತರಿಸಬೇಕಾದ ದಿನಾಂಕ : 12-12-2018.
4. ಉತ್ತರಿಸುವವರು : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳು, ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು.

	ಪ್ರಶ್ನೆ	ಉತ್ತರ
ಅ	ಇಂಡಿ ಪಟ್ಟಣದಲ್ಲಿರುವ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆಗೆ ಸ್ವಂತ ಕಟ್ಟಡ ಹಾಗೂ ಮೂಲಭೂತ ಸೌಲಭ್ಯಗಳಿಲ್ಲದೆ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	2017 -18ನೇ ಸಾಲಿನಲ್ಲಿ ಮಂಜೂರಾದ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆಯು ಇಂಡಿ ಪಟ್ಟಣದ ಕಾಳಿಕಾನಗರದಲ್ಲಿ ಖಾಸಗಿ ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಸದರಿ ವಸತಿ ಶಾಲೆಗೆ ಮೂಲಸೌಲಭ್ಯಗಳನ್ನು ಒದಗಿಸಲಾಗಿದೆ.
ಆ	ಹಾಗಿದ್ದಲ್ಲಿ, ಸದರಿ ಶಾಲೆಯ ಕಟ್ಟಡ ನಿರ್ಮಾಣಕ್ಕೆ ಇಂಡಿ ಪಟ್ಟಣದ ಹೊರಭಾಗದಲ್ಲಿ ಲಭ್ಯವಿರುವ ಸರ್ಕಾರಿ ಜಮೀನನ್ನು ಗುರುತಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು, ಸದರಿ ವಸತಿ ಶಾಲೆಯ ಕಟ್ಟಡ ನಿರ್ಮಾಣಕ್ಕಾಗಿ ಇಂಡಿ ಪಟ್ಟಣದ ವಸಂತನಗರದ ಸರ್ಕಾರಿ ಜಮೀನು ರಿ.ಸ.ನಂ:738ರಲ್ಲಿ 5 ಎಕರೆ ಜಮೀನನ್ನು ಮಾನ್ಯ ಜಿಲ್ಲಾಧಿಕಾರಿಗಳು, ವಿಜಯಪುರ ರವರ ಆದೇಶ ಸಂಖ್ಯೆ :ಎಲ್.ಎನ್.ಡಿ:ಸಿಆರ್-321: 2017-18, ದಿನಾಂಕ :19-09-2018ರ ಆದೇಶದಂತೆ ಮಂಜೂರಾಗಿದೆ. ಸದರಿ ಜಮೀನು ಇಲಾಖೆಯ ಹೆಸರಿನಲ್ಲಿ ಆರ್.ಟಿ.ಸಿ ದಾಖಲಿಸುವ ಹಂತದಲ್ಲಿದೆ.
ಇ	ಬಂದಿದ್ದಲ್ಲಿ, ಸದರಿ ವಸತಿ ಶಾಲೆಗೆ ಸ್ವಂತ ಕಟ್ಟಡ ನಿರ್ಮಿಸಲು ಅನುದಾನ ಮಂಜೂರು ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು;	ಸದರಿ ವಸತಿ ಶಾಲೆಯ ಕಟ್ಟಡ ನಿರ್ಮಾಣಕ್ಕಾಗಿ ಮಾನ್ಯ ಆಯುಕ್ತರು, ಕರ್ನಾಟಕ ಗೃಹ ಮಂಡಳಿ, ಬೆಂಗಳೂರುರವರಿಗೆ ಸುಮಾರು ರೂ.9.00 ಕೋಟಿ ರಿಂದ 10.00 ಕೋಟಿ ಅನುದಾನಕ್ಕೆ ಅನುಗುಣವಾಗಿ ಅಂದಾಜು ಪಟ್ಟಿ ಹಾಗೂ ನೀಲ ನಕ್ಷೆಯನ್ನು ತಯಾರಿಸಿ ಸಲ್ಲಿಸಲು ನಿರ್ದೇಶನಾಲಯದ ಪತ್ರ ಸಂಖ್ಯೆ:ಅಸಂನಿ/ಮೊದೇವಶಾ /ಸಿಆರ್-60/2015-16, ದಿನಾಂಕ: 24-09-2018 ರಂದು ಪತ್ರ ಬರೆಯಲಾಗಿದೆ.
ಈ.	ಹಾಗಿದ್ದಲ್ಲಿ, ಯಾವಾಗ ಮತ್ತು ಎಷ್ಟು ಅನುದಾನ ಮಂಜೂರು ಮಾಡಲಾಗುವುದು; ಅದಕ್ಕಾಗಿ ಸರ್ಕಾರ ಕೈಗೊಳ್ಳುವ ಕ್ರಮಗಳೇನು (ವಿವರ ನೀಡುವುದು)?	ಆಯುಕ್ತರು, ಕರ್ನಾಟಕ ಗೃಹ ಮಂಡಳಿ, ಬೆಂಗಳೂರುರವರಿಂದ ಅಂದಾಜುಪಟ್ಟಿ ಮತ್ತು ನೀಲಿ ನಕ್ಷೆ ಸಲ್ಲಿಸಿದ ನಂತರ ಅನುದಾನ ಮಂಜೂರು ಮಾಡಲು ಕ್ರಮ ಕೈಗೊಳ್ಳಲಾಗುವುದು.

ಕಡತ ಸಂಖ್ಯೆ: MWD 64 LMQ 2018

(ಬಿ.ಜೆಡ್.ಜಮೀರ್ ಅಹ್ಮದ್ ಖಾನ್)
ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು
ಹಾಗೂ ಗ್ರಾಹಕರ ವ್ಯವಹಾರಗಳು,

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 13

2. ವಿಧಾನ ಸಭೆಯ ಸದಸ್ಯರು : ಶ್ರೀ ಪ್ರಭು ಬಿ. ಚೌವ್ಹಾಣ್ (ಔರಾದ್)

3. ಉತ್ತರಿಸಬೇಕಾದ ದಿನಾಂಕ : 12.12.2018

4. ಉತ್ತರಿಸುವ ಸಚಿವರು : ಮಾನ್ಯ ಆಹಾರ ಮತ್ತು ನಾಗರೀಕ, ಸರಬರಾಜು, ಗ್ರಾಹಕರ ವ್ಯವಹಾರಗಳು, ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು

	ಪ್ರಶ್ನೆ	ಉತ್ತರ
ಅ)	ಮಹಾರಾಷ್ಟ್ರ ಹಾಗೂ ಆಂದ್ರ ಪ್ರದೇಶದ ಗಡಿಭಾಗದಲ್ಲಿ ಔರಾದ್ ತಾಲ್ಲೂಕು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು,
ಆ)	ಈ ತಾಲ್ಲೂಕಿನ ವ್ಯಾಪ್ತಿಯಲ್ಲಿ ಅಲ್ಪಸಂಖ್ಯಾತ ಸಮುದಾಯದವರು ವಾಸಿಸುತ್ತಿರುವ ಕಾಲೋನಿಗಳಲ್ಲಿ ಮೂಲಭೂತ ಸೌಲಭ್ಯಗಳಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:	ಹೌದು,
ಇ)	ಹಾಗಿದ್ದಲ್ಲಿ, ಈ ಕಾಲೋನಿಗಳ ಸರ್ವಾಂಗೀಣ ಅಭಿವೃದ್ಧಿಯ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ:	ಕಾಲೋನಿಗಳ ಸರ್ವಾಂಗೀಣ ಅಭಿವೃದ್ಧಿ ಕುರಿತಂತೆ ಮುಖ್ಯಮಂತ್ರಿಗಳ ಅಭಿವೃದ್ಧಿ ಯೋಜನೆಯಡಿಯಲ್ಲಿ 2017-18ನೇ ಸಾಲಿನಲ್ಲಿ ಅಲ್ಪಸಂಖ್ಯಾತರು ಹೆಚ್ಚಾಗಿ ವಾಸಿಸುವ ಕಾಲೋನಿಗಳ ಮೂಲಭೂತ ಸೌಕರ್ಯ ಗಳಿಗೆ ಔರಾದ್ ವಿಧಾನಸಭಾ ಕ್ಷೇತ್ರಕ್ಕೆ ರೂ.50.00 ಲಕ್ಷಗಳ ಅನುದಾನವನ್ನು ಜಿಲ್ಲಾಧಿಕಾರಿಗಳು, ಬೀದರ್ ಜಿಲ್ಲೆ ರವರಿಗೆ ಬಿಡುಗಡೆ ಮಾಡಲಾಗಿದೆ. ಹಾಗೂ 2018-19ನೇ ಸಾಲಿನಲ್ಲಿ ರೂ.25.00 ಲಕ್ಷಗಳನ್ನು ಜಿಲ್ಲಾಧಿಕಾರಿಗಳು, ಬೀದರ್ ಜಿಲ್ಲೆ ರವರಿಗೆ ಅನುದಾನ ಬಿಡುಗಡೆ ಮಾಡಲಾಗಿದೆ.

..2.

ಈ)	ಯಾವ ಕಾಲಮಿತಿಯಲ್ಲಿ ಈ ಕಾಲೋನಿಗಳಿಗೆ ಸಿ.ಸಿ ರಸ್ತೆ, ಚರಂಡಿ ನಿರ್ಮಾಣ ಮಾಡಲಾಗುವುದು.	2017-18ನೇ ಸಾಲಿನಲ್ಲಿ ಬಿಡುಗಡೆ ಮಾಡಿದ ರೂ. 50.00 ಲಕ್ಷಗಳ ಅನುದಾನಕ್ಕೆ ಜಿಲ್ಲಾಧಿಕಾರಿಗಳು ಬೀದರ್ ಜಿಲ್ಲೆ ರವರು ಸಿ.ಸಿ ರಸ್ತೆ, ಚರಂಡಿ ಕಾಮಗಾರಿಗಳಿಗೆ ದಿನಾಂಕ: 25.09.2018 ರಂದು ಆಡಳಿತಾತ್ಮಕ ಅನುಮೋದನೆ ನೀಡಿ ಕಾಮಗಾರಿಗಳನ್ನು 4 ತಿಂಗಳ ಒಳಗಾಗಿ ಪೂರ್ಣಗೊಳಿಸಿ ವರದಿ ನೀಡಲು ಸೂಚಿಸಿರುತ್ತಾರೆ. ಪ್ರಸಕ್ತ ಸಾಲಿನಲ್ಲಿ ಸರ್ಕಾರದ ಆದೇಶ ದಿನಾಂಕ: 05.11.2018 ರಂದು ರೂ.25.00 ಲಕ್ಷಗಳನ್ನು ಜಿಲ್ಲಾಧಿಕಾರಿಗಳು, ಬೀದರ್ ಜಿಲ್ಲೆ ರವರಿಗೆ ಬಿಡುಗಡೆ ಮಾಡಿದ್ದು, ಜನವರಿ-2019ರ ಮಾಹೆಯೊಳಗಾಗಿ ಅನುದಾನವನ್ನು ಉಪಯೋಗಿಸಿಕೊಳ್ಳಲು ಆದೇಶ ನೀಡಲಾಗಿದೆ.
ಉ)	ಈ ಕಾಮಗಾರಿಗಳಿಗೆ ತಗಲುವ ಅಂದಾಜು ವೆಚ್ಚವೆಷ್ಟು?	ಅಂದಾಜು ವೆಚ್ಚದ ಪ್ರಸ್ತಾವನೆ ಸ್ವೀಕರಿಸಿಲ್ಲ, ಸರ್ಕಾರದಿಂದ ಬಿಡುಗಡೆಯಾದ ಮೊತ್ತಕ್ಕೆ ಅನುಗುಣವಾಗಿ ಜಿಲ್ಲಾಧಿಕಾರಿಗಳು ಕಾಮಗಾರಿಗಳನ್ನು ಅನುಮೋದಿಸುತ್ತಾರೆ.

MWD 61 LMQ 2018

(ಬಿ.ಜೆಡ್ ಜಮೀರ್ ಅಹ್ಮದ್ ಖಾನ್)
ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು,
ಗ್ರಾಹಕರ ವ್ಯವಹಾರಗಳು, ಅಲ್ಪಸಂಖ್ಯಾತರ ಕಲ್ಯಾಣ
ಮತ್ತು ವಕ್ಫ್ ಸಚಿವರು

ಕರ್ನಾಟಕ ವಿಧಾನ ಸಭೆ

1. ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : 843
2. ಸದಸ್ಯರ ಹೆಸರು : ಶ್ರೀ ದತ್ತಾತ್ರೇಯ ಸಿ. ಪಾಟೀಲ ರೇವೂರ (ಅಪ್ಪುಗೌಡ) (ಗುಲ್ಬರ್ಗ ದಕ್ಷಿಣ)
3. ಉತ್ತರಿಸಬೇಕಾದ ದಿನಾಂಕ : 12-12-2018.
4. ಉತ್ತರಿಸುವವರು : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳು, ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು.

	ಪ್ರಶ್ನೆ	ಉತ್ತರ
ಅ	ಕಲಬುರಗಿ ಜಿಲ್ಲೆಯಲ್ಲಿ ಶಾದಿಮಹಲ್ ಕಾಮಗಾರಿ ಹಾಗೂ ಕಟ್ಟಡ ಬಾಡಿಗೆ ದರ ನಿಗದಿಯಲ್ಲಿ ಅವ್ಯವಹಾರ ನಡೆಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಈ ಕುರಿತು ತನಿಖೆ ನಡೆಸಲಾಗಿದೆಯೇ;	ಕಲಬುರಗಿ ಜಿಲ್ಲೆಯಲ್ಲಿ ಶಾದಿಮಹಲ್ ಕಾಮಗಾರಿಗಳ ಬಗ್ಗೆ ಸಾರ್ವಜನಿಕರಿಂದ ದೂರು ಹಾಗೂ ಮಾಹಿತಿ ಹಕ್ಕು ಅಧಿನಿಯಮ 2005ರಡಿಯಲ್ಲಿ ಶ್ರೀ ಶೇಖ ಶಫಿ ಇವರು ಮಾನ್ಯ ವಿಭಾಗೀಯ ಆಯುಕ್ತರು, ಕಲಬುರಗಿ ರವರಲ್ಲಿ ದೂರು ನೀಡಿರುವುದರಿಂದ ಮಾನ್ಯ ವಿಭಾಗೀಯ ಆಯುಕ್ತರು ಸಮುದಾಯ ಭವನಗಳ ಕಟ್ಟಡ ಕಾಮಗಾರಿಗಳ ಬಗ್ಗೆ ಪರಿಶೀಲನೆ ಮಾಡಲು ಕೆಳಕಂಡ 3 ಜನ ಅಧಿಕಾರಿಗಳ ತಂಡ ರಚನೆ ಮಾಡಿರುತ್ತಾರೆ. 1. ಉಪ ಕಾರ್ಯದರ್ಶಿ, ಜಿಲ್ಲಾ ಪಂಚಾಯತ್, ಕಲಬುರಗಿ. 2. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲ ಸಾರಿಗೆ, ಉಪವಿಭಾಗ ಸೇಡಂ. 3. ಜಿಲ್ಲಾ ಅಧಿಕಾರಿಗಳು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಕಲಬುರಗಿ ಸದರಿ ತಂಡದ ಅಧಿಕಾರಿಗಳು ಜಂಟಿಯಾಗಿ ಎಲ್ಲಾ ಸಮುದಾಯ ಭವನಗಳ ಕಾಮಗಾರಿ ಪರಿಶೀಲನೆ ಮಾಡಿ ಮಾನ್ಯ ವಿಭಾಗೀಯ ಆಯುಕ್ತರಿಗೆ ವರದಿ ಸಲ್ಲಿಸಿರುತ್ತಾರೆಂದು ಜಿಲ್ಲಾಧಿಕಾರಿಗಳು, ಕಲಬುರಗಿ ಇವರ ಪತ್ರ ದಿನಾಂಕ: 10-11-2017ರಲ್ಲಿ ತಿಳಿಸಿರುತ್ತಾರೆ.
ಆ	ತನಿಖೆ ನಡೆಸಲಾಗಿದ್ದರೇ; ತನಿಖಾ ವರದಿ ಅನುಸಾರ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಯಾವ ಕ್ರಮ ಜರುಗಿಸಲಾಗಿದೆ; (ತನಿಖಾ ವರದಿಯ ಪ್ರತಿ ನೀಡುವುದು ಹಾಗೂ ಕ್ರಮದ ಬಗ್ಗೆ ವಿವರ ನೀಡುವುದು)	ಅಲ್ಪಸಂಖ್ಯಾತರ ನಿರ್ದೇಶನಾಲಯದಿಂದ ದಿನಾಂಕ: 03.11.2017 ಮತ್ತು 06.09.2018 ರಂದು ಜಿಲ್ಲಾಧಿಕಾರಿಗಳು, ಕಲಬುರಗಿ ಜಿಲ್ಲೆ ರವರಿಂದ ವರದಿ ಕೋರಿದ್ದು, ಸದರಿಯವರಿಂದ ತನಿಖಾ ವರದಿ ಪಡೆದ ನಂತರ ಮುಂದಿನ ಸೂಕ್ತ ಕ್ರಮ ಜರುಗಿಸಲಾಗುವುದು.
ಇ	ಕ್ರಮ ಜರುಗಿಸದೆ ಇದ್ದಲ್ಲಿ, ಅದಕ್ಕೆ ಕಾರಣಗಳೇನು ಇದರ ಬಗ್ಗೆ ಸರ್ಕಾರದ ನಿಲುವೇನು (ವಿವರ ನೀಡುವುದು)?	

ಕಡತ ಸಂಖ್ಯೆ: MWD 65 LMQ 2018

(ಬಿ.ಜೆಡ್.ಜಮೀರ್ ಅಹ್ಮದ್ ಖಾನ್)
